## 20

# ತಂದೆಯ ಹಾಗೋ, ಮಕ್ಕಳ ಹಾಗೋ

# (7:2-53)

ನಮ್ಮ ಹಿಂದಿನ ಪಾಠದಲ್ಲಿ ನಂಬಿಕೆಯ ವೀರರಲ್ಲಿ ಒಬ್ಬನಾದ, ಮೊದಲ ಕ್ರೈಸ್ತ ಹತಸಾಕ್ಷಿಯಾದ ಸ್ತೇಫನನ ವ್ಯಕ್ತಿಗತ ಅಧ್ಯಯನವಿತ್ತು. ಸಭಾಮಂದಿರದ ಮುಂದೆ ಸ್ತೇಫನನು ಬೋಧಿಸಿದ ಬೋಧನೆಯೆಡೆಗೆ ನಾವು ಈಗ ಸಮೀಪದ ದೃಷ್ಟಿಯನ್ನು ಹರಿಸುವಾ.

ಸ್ತೇಫನನ ಬೋಧನೆಯು ಅಪೂರ್ವವಾದುದು. ಅಪೊಸ್ತಲರ ಕೃತ್ಯ ಪುಸ್ತಕದಲ್ಲಿನ ಕೆಲವುಗಳಲ್ಲಿ ಇದು ಒಂದಾಗಿದ್ದು, ಇದು ಅಪೊಸ್ತಲರಲ್ಲದ ವ್ಯಕ್ತಿಯಿಂದ ಮಾತಾಡಲ್ಪಟ್ಟದ್ದಾಗಿದೆ[1] - ಮತ್ತು ಈ ಪುಸ್ತಕದಲ್ಲಿನ ಅತೀ ಉದ್ದವಾದ ಪ್ರಸಂಗವು ಇದಾಗಿದೆ![2] ನಮ್ಮ ಸರದಿಯ ಸಾಲನ್ನು ಬೋಧನೆಯ ಕೊನೆ ಮಾತುಗಳತ್ತ ತೆಗೆದುಕೊಂಡು ಹೋಗುವಾಗ (7:51-53), "ತಂದೆಯ ಹಾಗೋ" "ಮಕ್ಕಳ ಹಾಗೋ" ಎಂಬ ಶಿರೋನಾಮೆಯ ಪಾಠವನ್ನು ನಾವು ಕೊಡಬಹುದು. ಕೆಲವರು ಸ್ತೇಫನನ ಬೋಧನೆಯನ್ನು "ಪುನರಾಮರ್ಷೆಯ ಜೊತೆ ಅಂತ್ಯಭಾಗದಲ್ಲಿ ಕೆಲ ಅವಮಾನಕರ ಅಂಶಗಳನ್ನು ಒಳಗೊಂಡ ನಿರಾಸಕ್ತದಾಯಕ ಯೆಹೂದ ಇತಿಹಾಸವಾಗಿದೆ" ಎಂದು ತಳ್ಳಿಹಾಕಿದ್ದಾರೆ. ಪ್ರತಿಯೊಂದೂ ಸೂಚನೆಯಲ್ಲಿಯೂ, ಹೇಗೋ, ಇದು ಪ್ರೇರೇಪಣೆಯಿಂದ ಮಾತಾಡಲ್ಪಟ್ಟದ್ದು ಮತ್ತು ಪಾಠದ ಪ್ರತಿಯೊಂದು ವಾಕ್ಯವೂ ಉದ್ದೇಶಕ್ಕಾಗಿಯೇ ಇರುವುದೇ ಆಗಿದೆ.

ಸ್ತೇಫನನು ತನ್ನ ಸಮರ್ಥನೆಯಲ್ಲಿ ಮೂರು ಮೂಲ ಒತ್ತುಗಳನ್ನು ಹೊಂದಿದ್ದನು: (1) ಅವನು, ಮಾಡಲ್ಪಟ್ಟ ಆರೋಪಗಳ ವಿರುದ್ಧ ತನ್ನನ್ನು ತಾನು ಸಮರ್ಥಿಸಿಕೊಂಡನು. (2) ಆತನು ಹೀಗೆಮಾಡುತ್ತಿರುವಾಗ, ಅದನ್ನು ಮಾಡಿದ್ದು ತಾನಲ್ಲ ಎಂಬುದನ್ನು ಆತನು ಒತ್ತಿ ಹೇಳಿದನು, ಆದರೆ ಆ ತಪ್ಪನ್ನು ಮಾಡಿದವರು ಆ ದೋಷದ ಹಿಂಸೆಯನ್ನು ಆತನ ವಿರುದ್ಧ ತಂದರು. (3) ಆತನ ಪಾಠವು ಕ್ರಿಸ್ತ ಕೇಂದ್ರಿಕೃತವಾದುದು ಆಗಿತ್ತು. ನಾವು ನೋಡುವಂತೆ, ಸಂಪೂರ್ಣ ಬೋಧನೆಯುದ್ದಕ್ಕೂ ಮೆಸ್ಸೀಯನ ಮೇಲೆ ಒತ್ತಿಹೇಳುವಿಕೆ ಮೇಲೆ ಮುಂದೆ ಸಾಗುತ್ತದೆ, ಇದು ಕೆಲಸಾರಿ ಸ್ಪಷ್ಟವಾಗಿ ಹೇಳಲ್ಪಟ್ಟಂತೆ ಸೂಚಿತವಾಗಿರುತ್ತದೆ.[3]

## ಪರಿಶುದ್ಧವಾದ ಒಡಂಬಡಿಕೆ (7:2-16)

ಸ್ತೇಫನನು ಹೀಗೆ ಪ್ರಾರಂಭಿಸಿದನು, "ಸಹೋದರರೇ ತಂದೆಗಳೇ ಕೇಳಿರಿ!" (7:2ಎ). ಆತನ ಮಾತುಗಳು ಮಂಡಲಿಯಲ್ಲಿರುವವರಿಗೆ[4] ಗೌರವ ತೋರಿಸುವಂಥವುಗಳೇ ಆಗಿದ್ದವು. ಯೆಹೂದಿಗಳು ತಮ್ಮ ರಾಷ್ಟ್ರದ ಇತಿಹಾಸದ ಪುನರಾವರ್ತನೆ ಮಾಡುವುದನ್ನು ಪ್ರೀತಿಸುವವರಾಗಿದ್ದರು; ಇದು ಅವರು ದೇವರ ಮಕ್ಕಳು ಎಂಬುದನ್ನು ಒತ್ತಿ ಹೇಳುವಂತದ್ದಾಗಿದೆ. ಸ್ತೇಫನನ ಆರಂಭಿಕ ಮಾತುಗಳು ಅವರನ್ನು ನಿರಾಯುಧರನ್ನಾಗಿಸುವುದೇ ಆಗಿತ್ತು:

> "ನಮ್ಮ ಮೂಲಪುರುಷನಾದ ಅಬ್ರಹಾಮನು ಖಾರಾನಿನಲ್ಲಿ[5] ವಾಸಮಾಡಿದ್ದಕ್ಕಿಂತ ಮುಂಚೆ ಮೆಸೊಪೊತಾಮ್ಯದಲ್ಲಿದ್ದಾಗ ಪ್ರಭಾವಸ್ವರೂಪನಾದ ದೇವರು ಅವನಿಗೆ ಕಾಣಿಸಿಕೊಂಡು ನಿನ್ನ ಸ್ವದೇಶವನ್ನೂ ನಿನ್ನ ಬಂಧುಬಳಗವನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟುಹೋಗು ಎಂದು ಹೇಳಿದನು. ಆಗ ಅವನು ಕಸ್ದೀಯರ[6] ದೇಶದಿಂದ ಹೊರಟುಹೋಗಿ ಖಾರಾನಿನಲ್ಲಿ[7] ವಾಸವಾಗಿದ್ದನು. ಅವನ ತಂದೆ ಸತ್ತ ಮೇಲೆ ದೇವರು ಅವನನ್ನು ಅಲ್ಲಿಂದ ನೀವು ಈಗ ವಾಸವಾಗಿರುವ[8] ದೇಶಕ್ಕೆ

ಬರಮಾಡಿದನು. ಇದರಲ್ಲಿ ಅವನಿಗೆ ಕಾಲಿಡುವಷ್ಟು ಭೂಮಿಯನ್ನು[9] ಸ್ವಾಸ್ಥ್ಯವಾಗಿಕೊಡದೆ ಅವನಿಗೆ ಮಕ್ಕಳು ಇನ್ನೂ ಇಲ್ಲದಿರುವಾಗ - ಈ ದೇಶವನ್ನು ನಿನಗೂ ನಿನ್ನ ಹಿಂದೆ ಬರುವ ನಿನ್ನ ಸಂತತಿಗೂ ಸ್ವಾಸ್ತಿಯಾಗಿ ಕೊಡುವೆನು ಎಂದು ಅವನಿಗೆ ವಾಗ್ದನಮಾಡಿದನು. ಇದಲ್ಲದೆ ದೇವರು ಹೇಳಿದ್ದೇನಂದರೆ - ನಿನ್ನ ಸಂತಾನದವರು ಅನ್ಯದೇಶದಲ್ಲಿ ಪ್ರವಾಸಿಗಳಾಗಿರುವರು ಆ ಅನ್ಯದೇಶವರು ಅವರನ್ನು ದಾಸರನ್ನಾಗಿ ಮಾಡಿಕೊಂಡು ನಾನೂರು ವರುಷಗಳ[10] ತನಕ ಕ್ರೂರವಾಗಿ ನಡಿಸುವರು. ಮತ್ತು ನಿನ್ನ ಸಂತಾನದವರು ದಾಸರಾಗಿ ಸೇವಿಸುವ ಅನ್ಯಜನರಿಗೆ ನಾನೇ ನ್ಯಾಯತೀರಿ ಸುವೆನು. ಆ ಮೇಲೆ ಅವರು ಹೊರಟುಬಂದು ಈ ಸ್ಥಳದಲ್ಲಿ ನನ್ನನ್ನು ಆರಾಧಿಸುವರು ಎಂಬುದೇ. ಇದಲ್ಲದೆ ದೇವರು ಅವನ ಸಂಗಡ ಒಡಂಬಡಿಕೆಯನ್ನು ಮಾಡಿಕೊಂಡು ಅದಕ್ಕೆ ಗುರುತಾಗಿ ಸುನ್ನತಿಯನ್ನು ನೇಮಿಸಿದನು. ಅದಕ್ಕನುಸಾರವಾಗಿ ಅಬ್ರಹಾಮನು ಇಸಾಕನನ್ನು ಪಡೆದು ಎಂಟನೆಯ ದಿವಸದಲ್ಲಿ ಅವನಿಗೆ ಸುನ್ನತಿ[11] ಮಾಡಿದನು, ಮುಂದೆ ಇಸಾಕನು ಯಾಕೋಬನನ್ನು ಪಡೆದನು, ಯಾಕೋಬನು ಹನ್ನೆರಡು ಮಂದಿ ಮೂಲ ಪಿತೃಗಳನ್ನು ಪಡೆದನು" (7:2ಎ-8).

ಸ್ತೇಫನನು ದೇವರಿಗೆ ವಿರುದ್ಧವಾಗಿ ಮಾತನಾಡಿದ್ದಕ್ಕಾಗಿ ದೋಷಾರೋಪಣೆ ಮಾಡಲ್ಪಟ್ಟನು (6:11), ಆದರೆ ಆತನು ದೇವರಿಗಾಗಿ ಅಗಾಧವಾದ ಗೌರವವನ್ನು ತೋರಿದನು. ಅವನು ದೇವರನ್ನು "ಮಹಿಮೆಯುಳ್ಳ ದೇವರು"[12] ಎಂದು ಸೂಚಿಸಿದನು, ಮತ್ತು ಅಬ್ರಹಾಮ ಮತ್ತು ಇತರರ ಜೀವಿತದಲ್ಲಿ ದೇವರು ಹೇಗೆ ಕಾರ್ಯಮಾಡಿದನು ಎಂಬುದರತ್ತ ಆತನು ಅವನ ಗಮನ ಸೆಳೆದನು.

ಸ್ತೇಫನನು ಬಹುಶಃ ಇದಕ್ಕೆ ಸಂಬಂಧಿತವಾದ ಸತ್ಯಾರ್ಥಗಳನ್ನೂ ಸ್ಥಾಪಿಸಲೆತ್ನಿಸುತ್ತಿದ್ದ ನೇನೋ: ಇದು ಬಹುಶಃ ಅಬ್ರಹಾಮನ ಜೀವನದಲ್ಲಿನ ಶ್ರೇಷ್ಟ ಘಟನೆಗಳು ಧರ್ಮಶಾಸ್ತ್ರವು ಕೊಡುವುದಕ್ಕಿಂತ ಮತ್ತು ದೇವಾಲಯವು ಕಟ್ಟಲ್ಪಡುವುದಕ್ಕಿಂತ ಬಹುದಿನಗಳ ಮುಂಚೆ ಸಂಭವಿಸಿದ್ದು ಆಗಿದ್ದವು. ಈ ಮಹತ್ತಾದ ಘಟನೆಗಳು ಬಹುಶಃ ಪಾಲೀಸ್ತೇನಿನ ಹೊರಗೆ ಸಂಭವಿಸಿದರ ಬಗ್ಗೆ ಪುನರ್ಗಣೆಗೆ ಮಾಡಿದ್ದು ಬಹುಶಃ ವಿಷೇಶತೆಯಾಗಿದೆ! ಇದನ್ನು ನಾವು ಬಲ್ಲವರಾಗಿದ್ದೇವಷ್ಟೇ. ಸ್ತೇಫನನು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳನ್ನು ಸೂಚಿಸಿದಾಗ, ಪ್ರತಿಯೊಬ್ಬ ಯೆಹೂದಿಯ ಮನಸ್ಸು ಆ ವಾಗ್ದಾನವು ರಾಷ್ಟ್ರವೆಲ್ಲವನ್ನೂ ಆಶೀರ್ವದಿಸಲು ಬರಲಿರುವವನ ಬಗೆಗೆ, ಮೆಸ್ಸೀಯನ ಬಗೆಗೆ ಮಾತಾಡಿದ್ದನ್ನು ಮೆಲಕು ಹಾಕಿತು![13]

ಸ್ತೇಫನನು ಮೂಲಪುರುಷನ ಬಗೆಗೆ ಮಾತನಾಡಿದನು, ಆತನು ಹೊಸ ವಿಚಾರವನ್ನು ಪರಿಚಯಿಸಿದನು: ಯೆಹೂದಿ ಇತಿಹಾಸದುದ್ದಕ್ಕೂ ಅವರು ದೇವರು ನೇಮಿಸಿದ ವಿಮೋಚಕ ನನ್ನು *ತಿರಸ್ಕರಿಸುತ್ತಾ* ಬಂದರು! ಅವರ ತಂದೆಗಳಿಂದ ತಿರಸ್ಕರಿಸಲ್ಪಟ್ಟ ದೇವರಿಂದ ನೇಮಿಸಲ್ಪಟ್ಟ ವಿಮೋಚಕನು ಯೋಸೇಫನು:

"ಮೂಲಪಿತೃಗಳು ಹೊಟ್ಟೆ ಕಿಚ್ಚಿನಿಂದ ಯೋಸೇಫನನ್ನು ಐಗುಪ್ತದೇಶಕ್ಕೆ[14] ಮಾರಿಬಿಟ್ಟರು. ಅಲ್ಲಿ ದೇವರು ಅವನ ಸಂಗಡ ಇದ್ದು[15] ಅವನಿಗೆ ಬಂದ ಎಲ್ಲಾ ಸಂಕಟಗಳಿಂದ[16] ಅವನನ್ನು ಬಿಡಿಸಿ ಐಗುಪ್ತದೇಶದ ಅರಸನಾದ ಫರೋಹನ ಸಮ್ಮುಖದಲ್ಲಿ ದಯಾಪಾತ್ರನೂ ಜ್ಞಾನವುಳ್ಳವನೂ ಆಗಿರುವಂತೆ ಅನುಗ್ರಹಿಸಿದನು. ಫರೋಹನು ಅವನನ್ನು ಐಗುಪ್ತದೇಶದ ಮೇಲೆಯೂ ತನ್ನ ಎಲ್ಲಾ ಮನೆಯ ಮೇಲೆಯೂ ಅಧಿಕಾರಿಯಾಗಿ ಇಟ್ಟನು. ಆಗ ಐಗುಪ್ತ[17] ಕಾನಾನ್ ದೇಶಗಳಲ್ಲಿ ಎಲ್ಲೆಲ್ಲಿಯೂ ಬರ ಬಂದು ದೊಡ್ಡ ಸಂಕಟವಾಯಿತು; ನಮ್ಮ ಪಿತೃಗಳಿಗೆ ಕಾಳುಕಡ್ಡಿ ಸಿಕ್ಕಲಿಲ್ಲ. ಆದರೆ ಐಗುಪ್ತದೇಶದಲ್ಲಿ ದವಸಧಾನ್ಯ ಉಂಟೆಂಬದನ್ನು ಯಾಕೋಬನು ಕೇಳಿ ನಮ್ಮ ಪಿತೃಗಳನ್ನು ಮೊದಲು ಒಂದು ಸಾರಿ ಅಲ್ಲಿಗೆ ಕಳುಹಿಸಿದನು. ಅವರು

> ಎರಡನೆಯ ಸಾರಿಬಂದಾಗ ಯೋಸೇಫನು ಅಣ್ಣತಮ್ಮಂದಿರಿಗೆ ತನ್ನ ಗುರುತು ಸಿಕ್ಕುವಂತೆ ಮಾಡಿದನು. ಮತ್ತು ಯೋಸೇಫನ ವಂಶವು ಫರೋಹನಿಗೆ ತಿಳಿಯಬಂತು ಆ ಮೇಲೆ ಯೋಸೇಫನು ತನ್ನ ತಂದೆಯಾದ ಯಾಕೋಬನನ್ನೂ ತನ್ನ ಎಲ್ಲಾ ಬಂಧುಬಳಗವನ್ನೂ[18] ಒಟ್ಟಿಗೆ ಎಪ್ಪತ್ತೈದು ಮಂದಿಯನ್ನು ಕರೆಯಿಸಿಕೊಳ್ಳಲಾಗಿ. ಯಾಕೋಬನು ಐಗುಪ್ತ ದೇಶಕ್ಕೆ ಇಳಿದು ಹೋದನು[19] (7:9-14).

ಸ್ತೇಫನನಿಂದ ಒತ್ತಿ ಹೇಳಲ್ಪಟ್ಟ ಮೂರು ಸಂಗತಿಗಳನ್ನು ಇಲ್ಲಿ ಗಮನಿಸಿರಿ: (1) ಯೋಸೇಫನ ಸಹೋದರರು (ಮೂಲ ಪಿತೃಗಳನ್ನು ಮತ್ತು ಯೆಹೂದಿ ಜನರು ''ತಂದೆಗಳು'') ಯೋಸೇಫನನ್ನು ತಿರಸ್ಕರಿಸಿದರು. (2) ದೇವರು ಅವರಿಗೆ *ಎರಡನೆಯ* ಅವಕಾಶವನ್ನು ಕೊಟ್ಟನು (ಅವರು ಐಗುಪ್ತಕ್ಕೆ ಕಾಳುಗಳನ್ನು ಕೊಳ್ಳಲು ಬಂದಾಗ). (3) ಎರಡನೆಯ ಸಾರಿ, ಅವರು ಯೋಸೇಫನನ್ನು ತಮ್ಮ ವಿಮೋಚಕನಂತೆ - ಅಥವಾ ಇಲ್ಲದೆ ಹೋದರೆ ಅವರು ಹಸಿವಿನಿಂದ (ಬರದಿಂದ) ಸಾಯಬೇಕಿತ್ತು. ಸ್ತೇಫನು ತನ್ನ ಬೋಧನೆಯಲ್ಲಿ ಇನ್ನೊಬ್ಬ ವಿಮೋಚಕನನ್ನು ಸೂಚಿಸುವಂತೆ ಈ ಸತ್ಯಗಳನ್ನು ತಿರುಗಿ ಒತ್ತಿಹೇಳಿದನು.

ಸ್ತೇಫನನು ನಾಲ್ಕನೂರು ವರ್ಷದ ಇತಿಹಾಸಗಳನ್ನು ವರ್ಣಿಸುತ್ತಾ ಮುಂದೆ ಸಾಗುತ್ತಾನೆ:

> ಅಲ್ಲಿ ಅವನೂ ನಮ್ಮ ಪಿತೃಗಳೂ ತೀರಿಹೋದರು. ಅವರನ್ನು ಶೇಕೆಮಿಗೆ[20] ತೆಗೆದುಕೊಂಡು ಹೋಗಿ ಅಲ್ಲಿ ಹಮೋರನ ಮಕ್ಕಳಿಂದ ಅಬ್ರಹಾಮನು ಬೆಳ್ಳಿಕೊಟ್ಟು ಕೊಂಡುಕೊಂಡಿದ್ದ ಸಮಾಧಿಯೊಳಗೆ ಇಟ್ಟರು (7:15, 16).[21]

## ದಿಗಿಲುಗೊಳಿಸುವ ಒಡಂಬಡಿಕೆಗಳು (7:17-43)

ಸ್ತೇಫನನು ಮೋಶೆಯ ವಿರುದ್ಧ (6:11) ಮತ್ತು ಧರ್ಮಶಾಸ್ತ್ರದ ವಿರುದ್ಧ (6:13) ಧರ್ಮನಿಂದನೆಯ ಮಾತುಗಳಾನ್ನಾಡಿದ್ದಕ್ಕಾಗಿ ಹಿಂಸಿಸಲ್ಪಡುತ್ತಿದ್ದಾನೆ. ಆತನ ಬೋಧನೆಯ ಹೃದಯಭಾಗವು ಮೋಶೆಯ ಕಥೆಯನ್ನು ಹೇಳುತ್ತದೆ. ಆತನು ಹಿನ್ನಲೆಯ ಮಾಹಿತಿಯನ್ನು ಪ್ರಾರಂಭಿಸಿದನು:

> ಆದರೆ ದೇವರು ಅಬ್ರಹಾಮನಿಗೆ[22] ವಾಗ್ದನಮಾಡಿದ್ದ ಕಾಲವು ಹತ್ತರಕ್ಕೆ ಬರುತ್ತಿರುವಾಗ ನಮ್ಮ ಜನರು ಐಗುಪ್ತದೇಶದಲ್ಲಿ ಹೆಚ್ಚಿ ಬಹಳವಾದರು. ಕಡೆಗೆ ಯೋಸೇಫನನ್ನು[23] ಅರಿಯದ ಬೇರೊಬ್ಬ ಅರಸನು ಆಳಿಕೆಗೆ ಬಂದನು. ಈ ಆರಸನು ನಮ್ಮ ಜನರಲ್ಲಿ ಕುಯುಕ್ತಿಮಾಡಿ ಅವರ ಕೂಸುಗಳನ್ನು ಜೀವದಿಂದುಳಿಸಬಾರದೆಂದು ಹೊರಗೆ ಹಾಕಿಸಿ ನಮ್ಮ ಪಿತ್ರಗಳನ್ನು ಕ್ರೂರವಾಗಿ ನಡಿಸಿದನು[24] (7:17-19).

ಸ್ತೇಫನನ ಬೋಧನೆಯು ಮುಂದುವರೆಯುತ್ತಾ, ಹೇಗೆ ಹೇಳುತ್ತದೆಂದರೆ, ಈ ದುಃಖದ ಸಮಯದಲ್ಲಿ, ಜನಿಸಿದವನನ್ನು ದೇವರು ತನ್ನ ಜನರ ವಿಮೋಚಕನನ್ನಾಗಿ ಬಳಸಲ್ಪಟ್ಟನು:

> ಆ ಸಮಯದಲ್ಲೇ ಮೋಶೆಯು ಹುಟ್ಟಿದನು.[25] ಅವನು ದಿವ್ಯ ಸುಂದರನಾಗಿದ್ದನು; ಮತ್ತು ತಂದೆಯ ಮನೆಯಲ್ಲಿ ಮೂರು ತಿಂಗಳು ಸಾಕಲ್ಪಟ್ಟನು. ಅಮೇಲೆ ಅವನನ್ನು ಹೊರಗೆ ಹಾಕಿದಾಗ [ಅವನನ್ನು ಬುಟ್ಟಿಯಲ್ಲಿಟ್ಟು ನೈಲನದಿ ತೀರದಲ್ಲಿರುವ ಆಪುಹುಲ್ಲಿನಲ್ಲಿ ಬಚ್ಚಿಟ್ಟರು],[26] ಫರೋಹನ ಮಗಳು ಅವನನ್ನು ಎತ್ತಿಕೊಂಡು ಹೋಗಿ ತನ್ನ ಮಗನಾಗಿ ಸಾಕಿದಳು. ಮೋಶೆಯು ಐಗುಪ್ತದೇಶದವರ ಸರ್ವವಿಧ್ಯೆಗಳಲ್ಲಿಯೂ ಉಪದೇಶ ಹೊಂದಿಮಾತುಗಳಲ್ಲಿಯೂ ಕಾರ್ಯಗಳಲ್ಲಿಯೂ ಸಮರ್ಥನಾದನು (7:20-22).[27]

ಸ್ತೇಫನನು ಏನನ್ನೂ ಹೊಂದಿದ್ದಾನೆ ಎಂದು ನಂಬುವಂತದ್ದನ್ನು ಯಾರೊಬ್ಬರೂ ಕೇಳಿರಲಿಲ್ಲ ಆದರೆ ಮೋಶೆಯ ಬಗೆಗೆ ಉನ್ನತವಾದ ಗೌರವವನ್ನು ಹೊಂದಿದ್ದರು.

ನಂತರ ಆತನು ಮೋಶೆಯು ಹೇಗೆ ತಾನು ಇಬ್ರಿಯನು ಎಂದು ತಿಳಿದುಕೊಂಡಾಗ, ಆತನು ತನ್ನ ಜನರನ್ನು ಬಿಡಿಸುವ ಯೋಜನೆಯನ್ನು ಮಾಡಿದನು. ಸ್ತೇಫನನು ತನ್ನ ಕೇಳುಗರಿಗೆ ಇಸ್ರಾಯೇಲರನ್ನು ಬಿಡಿಸಲು ಮೋಶೆಯು ಮಾಡಿದ ಮೊದಲ ಪ್ರಯತ್ನದ ಬಗೆಗೆ ನೆನಿಪಿಸಿದಾಗ, ಆತನು ತನ್ನ ಸಹೋದರರಿಂದ ತಿರಸ್ಕರಿಸಲ್ಪಟ್ಟನು:

> "ಅವನಿಗೆ ನಾಲ್ವತ್ತು ವರುಷ ವಯಸ್ಸು ತುಂಬುತ್ತಾ[28] ಇರಲು ಇಸ್ರಾಯೇಲ್ ವಂಶಸ್ಥರಾದ ತನ್ನ ಸಹೋದರರನ್ನು ಹೋಗಿನೋಡಬೇಕೆಂಬ ಆಶೆಯು ಅವನ ಹೃದಯದಲ್ಲಿ ಹುಟ್ಟಿತು. ಅವರಲ್ಲಿ ಒಬ್ಬನಿಗೆ ಅನ್ಯಾಯವಾಗುವುದನ್ನು ಅವನು ನೋಡಿ ಅವನಿಗೆ ಆಶ್ರಯಕೊಟ್ಟು ಪೀಡಿಸುವ ಐಗುಪ್ತನನ್ನು ಹೊಡೆದು ಹಾಕಿ ಮುಯ್ಯಿಗೆ ಮುಯ್ಯಿ ತೀರಿಸಿದನು.[29] ದೇವರು ತನ್ನ ಕೈಯಿಂದ ಬಿಡುಗಡೆಯನ್ನು ಉಂಟುಮಾಡುತ್ತಾನೆಂಬದು ತನ್ನ ಸಹೋದರರಿಗೆ ತಿಳಿದುಬರುವದೆಂದು ಭಾವಿಸಿದನು;[30] ಆದರೆ ಅವರು ಹಾಗೆ ತಿಳಿದುಕೊಳ್ಳಲಿಲ್ಲ. ಮರುದಿನ ತಾವುತಾವೇ ಹೊಡೆದಾಡಿ ಕೊಳ್ಳುತ್ತಿರುವಾಗ ಅವನು ಎದುರಾಗಿ ಬಂದು "ಜನರೇ, ನೀವು ಸಹೋದರರಲ್ಲವೇ. ನೀವೇಕೆ ಒಬ್ಬರಿಗೊಬ್ಬರು ಅನ್ಯಾಯಮಾಡುತ್ತೀರಿ" ಎಂದು ಹೇಳಿ ಅವರನ್ನು ಸಮಾಧಾನಪಡಿಸಬೇಕೆಂದಿದ್ದನು. ಆದರೆ ತನ್ನ ಸ್ವಕುಲದವನಿಗೆ ಅನ್ಯಾಯಮಡುತ್ತಿದ್ದವನು - ನಿನ್ನನ್ನು ನಮ್ಮ ಮೇಲೆ ಅಧಿಕಾರಿಯನ್ನಾಗಿಯೂ ನ್ಯಾಯಾಧಿಪತಿಯನ್ನಾಗಿಯೂ ಇಟ್ಟವರು ಯಾರು?[31] ನಿನ್ನೆ ಆ ಐಗುಪ್ತ್ಯನನ್ನು ಕೊಂದಂತೆ ನನ್ನನ್ನೂ ಕೊಲ್ಲಬೇಕೆಂದಿದ್ದೀಯೋ ಎಂದು ಅವನನ್ನು ನೂಕಿಬಿಟ್ಟನು. ಈ ಮಾತನ್ನು ಕೇಳಿ ಮೋಶೆಯು ಓಡಿಹೋಗಿ[32] ಮಿದ್ಯಾನ್‌ದೇಶದಲ್ಲಿ ಪ್ರವಾಸಿಯಾದನು. ಅಲ್ಲಿ ಇಬ್ಬರು ಗಂಡುಮಕ್ಕಳನ್ನು ಪಡೆದನು" (7:23-29).

ದೇವರು ತನ್ನ ಜನರಿಗೆ ಯೋಸೇಫನ ಪ್ರಕರಣದಂತೆಯೇ ಮತ್ತೊಂದು ಅವಕಾಶವನ್ನು ಕೊಟ್ಟದ್ದನ್ನು ಸ್ತೇಫನನು ಇನ್ನೊಂದು ಸಾರಿದೃಷ್ಟಾಂತಿಕರಿಸಿದನು:

> ನಾಲ್ವತ್ತು ವರುಷ ತುಂಬಿದ ಮೇಲೆ ದೇವದೂತನು[33] ಸೀನಾಯಿಬೆಟ್ಟದ ಅಡವಿಯಲ್ಲಿ ಮುಳ್ಳಿನ ಪೊದೆಯೊಳಗೆ[34] ಉರಿಯುವ ಬೆಂಕಿಯಲ್ಲಿ ಅವನಿಗೆ ಕಾಣಿಸಿಕೊಂಡನು. ಮೋಶೆಯು ಅದನ್ನು ಕಂಡು ಆ ನೋಟಕ್ಕೆ ಆಶ್ಚರ್ಯಪಟ್ಟು ಚೆನ್ನಾಗಿ ನೋಡಬೇಕೆಂದು ಹತ್ತಿರ ಬರಲು - ನಾನು ನಿನ್ನ ಪಿತೃಗಳ ದೇವರು, ಅಬ್ರಹಾಮ ಇಸಾಕ ಯಾಕೋಬರ ದೇವರು ಎಂದು ಕರ್ತನ ಶಬ್ಧವುಂಟಾಯಿತು. ಆಗ ಮೋಶೆಯು ನಡುಗುತ್ತಾ ಸ್ಥಿರವಾಗಿ ನೋಡುವುದಕ್ಕೆ ಧೈರ್ಯವಿಲ್ಲದವನಾದನು. ಮತ್ತು ಕರ್ತನು ಅವನಿಗೆ - ನಿನ್ನ ಕಾಲಿನ ಕೆರಗಳನ್ನು ತೆಗೆ; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ. ಐಗುಪ್ತದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ; ಅವರ ಮೊರೆಯನ್ನು ಕೇಳಿ ಅವರನ್ನು ಬಿಡಿಸುವುದಕ್ಕೆ ಇಳಿದುಬಂದಿದ್ದೇನೆ; ಈಗ ನಿನ್ನನ್ನು ಐಗುಪ್ತ ದೇಶಕ್ಕೆ ಕಳುಹಿಸುತ್ತೇನೆ, ಬಾ ಎಂದು ಹೇಳಿದನು (7:30-34).

ಮೋಶೆಯು ದೇವರ ವಿಮೋಚಕನು ಮತ್ತು ಆತನು ಅವರ ಪಿತೃಗಳಿಂದ ತಿರಸ್ಕರಿಸಪಟ್ಟವನು ಎಂಬ ವಿಚಾರವನ್ನು ಅವರೇನಾದರೂ ಗ್ರಹಿಸದೇ ಹೋಗುವುದೆಂದು, ಎಂದು ತಿಳಿದು ಸ್ತೇಫನನು ಈ ನಿಜಾಂಶವನ್ನು ದಾಕ್ಷಿಣ್ಯವಿಲ್ಲದೇ ಅವರ ಮುಂದೆ ಇಟ್ಟನು: "ಯಾವ ಮೋಶೆಯನ್ನು ನಿನ್ನನ್ನು *ಅಧಿಪತಿಯನ್ನಾಗಿಯೂ* ಅಧಿಕಾರಿಯನ್ನಾಗಿಯೂ ಇಟ್ಟವರು ಯಾರೆಂದು ಹೇಳಿ ಬೇಡವೆಂದರೋ ["*ತಿರಸ್ಕರಿಸಿದರು*"; NIV] ಅವನನ್ನೇ ದೇವರು ಪೊದೆಯಲ್ಲಿ ಕಾಣಿಸಿಕೊಂಡ ದೂತನ ಕೈಯಿಂದ ಅಧಿಕಾರಿಯನ್ನಾಗಿಯೂ *ಬಿಡುಗಡೆ*

*ಮಾಡುವವನನ್ನಾಗಿಯೂ* ನೇಮಿಸಿದನು" (7:35). ಯೋಸೇಫನ ಕಥೆಯಲ್ಲಿ ಒಂದು ವೇಳೆ ಅವರು ವಿಮೋಚಕನನ್ನು *ಎರಡನೆಯ* ಸಾರಿ ತಿರಸ್ಕರಿಸಿದ್ದಾದರೆ (ಮತ್ತು ಐಗುಪ್ತದಿಂದ ಹೊರಗೆ ಆತನನ್ನು ಹಿಂಬಾಲಿಸದೇ ಹೋಗಿದ್ದರೆ), ಅವರು ಸಾಯಬಹುದಿತ್ತು (ಗುಲಾಮತ್ವದಲ್ಲಿ).

35ನೆಯ ವಚನದ ಪ್ರಾರಂಭದಲ್ಲಿ, ಸ್ತೇಫನನು ಮೋಶೆಯ ಸ್ಪಷ್ಟವಾದ ಚಿತ್ರಣವನ್ನು ಇಟ್ಟನು:

> ... ಮೋಶೆಯನ್ನು - ನಿನ್ನನ್ನು ಅಧಿಕಾರಿಯನ್ನಾಗಿಯೂ ನ್ಯಾಯಾಧಿಪತಿಯನ್ನಾಗಿಯೂ ಇಟ್ಟವರು ಯಾರೆಂದು ಹೇಳಿ ಬೇಡವೆಂದರೋ ಅವನನ್ನೇ ದೇವರು ಪೊದೆಯಲ್ಲಿ ಕಾಣಿಸಿಕೊಂಡ ದೂತನ ಕೈಯಿಂದ ಅಧಿಕಾರಿಯನ್ನಾಗಿಯೂ ಬಿಡುಗಡೆಮಾಡುವವನ್ನಾಗಿಯೂ ನೇಮಿಸಿದನು. ಅವನೇ ಐಗುಪ್ತದೇಶದಲ್ಲಿಯೂ ಕೆಂಪು ಸಮುದ್ರದಲ್ಲಿಯೂ ನಾಲ್ವತ್ತುವರುಷ ಅಡವಿಯಲ್ಲಿಯೂ ಅದ್ಭುತ ಕಾರ್ಯಗಳನ್ನೂ ಸೂಚಕಕಾರ್ಯಗಳನ್ನು ಮಾಡುತ್ತಾ ಅವರನ್ನು ನಡಿಸಿಕೊಂಡು ಬಂದವನು. ಆ ಮೋಶೆಯೇ ದೇವರು - ನನ್ನನ್ನು ಏರ್ಪಡಿಸಿದಂತೆ ನಿಮ್ಮ ಸಹೋದರರಲ್ಲಿ[35] ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿಕೊಡುವನು ಎಂದು ಇಸ್ರಾಯೇಲ ಜನರಿಗೆ ಹೇಳಿದವನು. ಅವನೆ ಸೀನಾಯಿಬೆಟ್ಟದಲ್ಲಿ ತನ್ನೊಡನೆ ಮಾತಾಡಿದ ದೂತನಿಗೂ ನಮ್ಮ ಪಿತೃಗಳಿಗೂ ಅಡವಿಯಲ್ಲಿದ್ದ ಸಭೆಯೊಳಗೆ[36] ಮಧ್ಯಸ್ಥನಾಗಿದ್ದು ಜೀವಕರವಾದ ದೇವೋಕ್ತಿಗಳನ್ನು ಹೊಂದಿ ನಮಗೆ ಕೊಟ್ಟವನು (7:35-38).

ಈ ಬರಹದಲ್ಲಿ ಮೋಶೆಯ ಕಳೆದ ನಾಲ್ವತ್ತು ವರುಷದ "ಜೀವಿತವನ್ನು ಚಿತ್ರಣದಲ್ಲಿ"[37] ಸ್ತೇಫನನು ಮೋಶೆಗೂ ಮತ್ತು ಮೋಶೆಯ ಮೂಲಕ ಕೊಡಲ್ಪಡಲಾದ ಧರ್ಮಶಾಸ್ತ್ರಕ್ಕೂ ಗೌರವವನ್ನು ತೋರಿಸಿದನು. ದೇವದೂತನು ಮೋಶೆಯ ಜೊತೆಯಲ್ಲಿ ಬೆಟ್ಟದ ಮೇಲೆ ಮಾತಾನಾಡಿದ್ದನ್ನು ಸ್ತೇಫನನು ಸೂಚಿಸುವವನಾಗಿದ್ದಾನೆ ಮತ್ತು ಸ್ತೇಫನನು ಯೆಹೂದಿಗಳಿಗೆ ಧರ್ಮಶಾಸ್ತ್ರವನ್ನು "ಸಜೀವ ದಿವ್ಯವಾಣಿಯಂತೆ" ಸೂಚಿಸುವವವಾಗಿದ್ದಾನೆ. ಹೀಗೆ ಸ್ತೇಫನನು ತನ್ನನ್ನು ತಾನು ಮೋಶೆ ಮತ್ತು ಮೋಶೆಯ ಧರ್ಮಶಾಸ್ತ್ರದ ನಿಂದನೆಯ ಆಪಾದನೆಯ ವಿರುದ್ಧ ತಾನು ನಿರಪರಾಧಿ ಎಂದು ಆತನು ಸಾಭೀತುಪಡಿಸಿದನು.

ಸ್ತೇಫನನ ಮಾತುಗಳು ಇನ್ನೊಂದು ಆಳವಾದ ಉದ್ದೇಶವನ್ನು ಹೊಂದಿದ್ದವು. ಆತನು ಮೋಶೆಯು ಹೇಳಿದ "ದೇವರು ನನ್ನನ್ನು ಏರ್ಪಡಿಸಿದಂತೆ ನಿಮ್ಮ ಸಹೋದರರಲ್ಲಿ ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿಕೊಡುವನು" ಎಂಬ ಮಾತುಗಳನ್ನು ನ್ಯಾಯಮಂಡಲಿಗೆ ಪುನಸ್ಮರಣೆ ಮಾಡಿಕೊಟ್ಟನು. ನಂತರ ಮೋಶೆಯು ಹೇಗಿದ್ದನು ಎಂಬುದನ್ನು ನೆನಪಿಸುತ್ತಾನೆ: ಆತನು ಒಬ್ಬ ಆಡಳಿತಗಾರನಾಗಿದ್ದನು (ವಚನ 35). ಆತನು ವಿಮೋಚಕನಾಗಿದ್ದನು (ವಚನ 35). ಆತನು ಅದ್ಭುತಕಾರ್ಯಗಳನ್ನು ಮಾಡುವವನಾಗಿದ್ದನು (ವಚನ 36). ಆತನು ಪ್ರವಾದಿಯಾಗಿದ್ದನು (ವಚನ 37). ಆತನು ಸಭೆಯನ್ನು ಹೊಂದಿದ್ದನು (ಚರ್ಚು) (ವಚನ 38). ಆತನು ದೇವರ ಸಂದೇಶವನ್ನು ಜನರಿಗೆ ಪ್ರಕಟಿಸಿದನು (ವಚನ 38) ನಜರೇತಿನ ಯೇಸುವಿನಂತಿರುವ ಈ ಸಾಮ್ಯವನ್ನು ಕಳೆದು ಕೊಳ್ಳುವದು ಕಷ್ಟದಾಯಕವಾದದ್ದು.

ಹೇಗೋ, ಸ್ತೇಫನನು ಆ ಹೋಲಿಕೆಯನ್ನು ಒತ್ತಿಹೇಳಲು ಸಿದ್ಧನಾಗಿರಲಿಲ್ಲ. ಆತನು ಮೊದಲು ತನ್ನ ಕೇಳುಗರಿಗೆ ದೇವರು ಅವರ ಮೂಲ ಪಿತೃಗಳಿಗೆ ಎರಡನೆಯ ಅವಕಾಶವನ್ನು ಕೊಟ್ಟಾಗ ಅವರು ತಿರುಗಿ ತಿರಸ್ಕರಿಸಿದ್ದನ್ನು ನೆನಪಿಸುವವನಾಗಿದ್ದಾನೆ:

> ಆದರೆ ನಮ್ಮ ಪಿತೃಗಳು ಅವನ ಮಾತುಗಳನ್ನು ಕೇಳುವುದಕ್ಕೆ ಮನಸ್ಸಿಲ್ಲದವರಾಗಿ ಅವನನ್ನು ತಳ್ಳಿಬಿಟ್ಟು ತಿರುಗಿ ಐಗುಪ್ತದೇಶದ ಕಡೆಗೆ ಮನಸ್ಸಿಟ್ಟರು [*"ತಿರಸ್ಕರಿಸಿದರು"*; NIV] ಅವರು ಆರೋನನಿಗೆ - ಐಗುಪ್ತದೇಶದಿಂದ ನಮ್ಮನ್ನು ಕರಕೊಂಡು ಬಂದ

ಆ ಮೋಶೆಯು ಏನಾದನೋ ಗೊತ್ತಿಲ್ಲ, ನಮ್ಮ ಮುಂದುಗಡೆಯಲ್ಲಿ ಹೋಗುವುದಕ್ಕೆ ದೇವರುಗಳನ್ನು ನಮಗೆ ಮಾಡಿಕೊಡು ಎಂದು ಹೇಳಿದರು. ಆ ದಿನಗಳಲ್ಲಿ ಅವರು ಒಂದು ಬಸವನನ್ನು[38] ಮಾಡಿ ಆ ವಿಗ್ರಹಕ್ಕೆ ಬಲಿಯನ್ನರ್ಪಿಸಿ ತಮ್ಮ ಕೈಗಳಿಂದ ಮಾಡಿದ ವಸ್ತುಗಳಲ್ಲಿ ಉಲ್ಲಾಸಪಟ್ಟರು (7:39-41).

ಸಜೀವವಾದ ದಿವ್ಯವಾಣಿಯ ಬದಲಾಗಿ, ಅವರು ಜೀವವಿಲ್ಲದ ಮೂರ್ತಿಗಳನ್ನು ಒಪ್ಪಿಕೊಂಡರು. ಯಾವಾಗ ಅವರು ದೇವರ ವಿಮೋಚಕನನ್ನು ಎರಡನೆಯ ಬಾರಿ ತಿರಸ್ಕರಿಸಿದರೋ, ದೇವರ ಕೋಪವು ಅವರ ಮೇಲೆ ಬಂತು. ಅರಣ್ಯದಲ್ಲಿನ ಇಸ್ರಾಯೇಲರ ದೇವರನ್ನು ತಿರಸ್ಕರಿಸುವಿಕೆಯು ಮುಂದಿನ ದಿನಗಳಲ್ಲಿಯ ತಿರಸ್ಕರಿಸುವಿಕೆಯ ಛಾಯೆಯಾಗಿದ್ದು, ಸ್ತೇಫನನು ಆ ಚರಿತ್ರೆಯನ್ನು ಸಂಕ್ಷಿಪ್ತಗೊಳಿಸಿ ಪ್ರವಾದಿಯಾದ ಆಮೋಸನ ಮಾತುಗಳನ್ನು ಬಳಸುವ ಮೂಲಕ ದೇವರು ತಿರಸ್ಕರಿಸುವಿಕೆಯನ್ನು ಸಹಿಸಿಕೊಳ್ಳಲಾರನು ಎಂದು ಹೇಳುತ್ತಾನೆ:

"ಆದರೆ ದೇವರು ಅವರಿಗೆ ವಿಮುಖನಾಗಿ ಆಕಾಶದ ನಕ್ಷತ್ರ ಗಣವನ್ನು[39] ಪೂಜಿಸುವುದಕ್ಕೆ ಅವರನ್ನು ಒಪ್ಪಿಸಿಬಿಟ್ಟನು.[40] ಪ್ರವಾದಿಗಳ ಗ್ರಂಥದಲ್ಲಿ[41] ಬರೆದಿರುವದೇನೆಂದರೆ ಇಸ್ರಾಯೇಲ್ ವಂಶದವರೇ, ನೀವು ಅರಣ್ಯದಲ್ಲಿದ್ದ ನಾಲ್ವತ್ತು ವರುಷ ನನಗೆ ಯಜ್ಞಗಳನ್ನೂ, ಬಲಿಗಳನ್ನೂ ಅರ್ಪಿಸುತ್ತಿದ್ದಿರೋ?[42] ಇಲ್ಲವಲ್ಲಾ; ಅದಕ್ಕೆ ಬದಲಾಗಿ ನೀವು ಪೂಜಿಸಬೇಕೆಂದು ಮಾಡಿಕೊಂಡ ಮೂರ್ತಿಗಳನ್ನು ಅಂದರೆ ಮೊಲೋಖನ ಗುಡಾರವನ್ನೂ[43] ರೊಂಫಾ[44] ದೇವತೆಯ ನಕ್ಷತ್ರರೂಪವನ್ನೂ ಹೊತ್ತುಕೊಂಡು ಹೋದಿರಿ. ಆದದರಿಂದ ನಾನು ನಿಮ್ಮನ್ನು ಬಾಬೆಲಿನ ಆಚೆಗೆ ಗಡೀಪಾರು ಮಾಡುವೆನು ಎಂಬದು"[45] (7:42, 43).

ದೇವರು ಇಸ್ರಾಯೇಲರನ್ನು ಗುಲಾಮತನದಿಂದ (ಐಗುಪ್ತದಲ್ಲಿಂದ) ಬಿಡಿಸಿದನು, ಆದರೆ ಯಾವಾಗ ದೇವರು ತಾನು ನೇಮಿಸಿದ ವಿಮೋಚಕನನ್ನು ಅವರು ತಿರಸ್ಕರಿಸುವುದನ್ನು ಮುಂದುವರೆಸಿದರೋ ಆಗ (ಅರಣ್ಯದಲ್ಲಿ ಮತ್ತು ಕಾನಾನಿನಲ್ಲಿ), ದೇವರು ಅವರನ್ನು ತಿರುಗಿ (ಬೆಬಿಲೋನಿನಲ್ಲಿ) ಗುಲಾಮತನಕ್ಕೆ ಕಳುಹಿದನು!

## ಪರಿಶುದ್ಧ ಅಂಗಳ (7:44-50)

ಸ್ತೇಫನನು ಮೊದಲು ಮಾತನಾಡಿದ ದೇವರ ಗುಡಾರ ಹಾಗೂ ದೇವಾಲಯದ ಬಗೆಗೆ ಮಾತಾಡಿದ್ದಕ್ಕೆ, ಮೊಲೋಖನ ಗುಡಾರದ ಆಧಾರವು ಆತನ ಪ್ರಸಂಗದ ಮೂರನೆಯ ಭಾಗಕ್ಕೆ ಕೊಂಡಿಯಂತೆ ಆಗಿದೆ. ಈ ಮೂರನೆಯ ಭಾಗದಲ್ಲಿ, ಸ್ತೇಫನನು ತಾನು ದೇವಾಲಕ್ಕೆ ವಿರುದ್ಧವಾಗಿ ಮಾತನಾಡಿದ ಆಪಾದನೆಗೆ ಉತ್ತರಿಸುತ್ತಿದ್ದನು (6:13, 14). ಹೇಗೋ, ಆತನು ಈ ಆರೋಪವನ್ನು ಇತರ ಆರೋಪಗಳಿಗಿಂತ ವಿಭಿನ್ನ ರೀತಿಯಲ್ಲಿ ತೆಗೆದುಕೊಳ್ಳುತ್ತಾನೆ. ಆತನು ದೇವರ, ಮೋಶೆಯ ಮತ್ತು ಧರ್ಮಶಾಸ್ತ್ರದ ವಿರುದ್ಧವಾಗಿ ಮಾತನಾಡಿದ ಆರೋಪಗಳ ಬಗೆಗೆ ಮಾತನಾಡುತ್ತಿದ್ದಾಗ, ಆತನು ಈ ಎಲ್ಲ ಮೂವರಿಗೂ ಕೊಡಬೇಕಾದ ಗೌರವವನ್ನು ತೋರಿಸಿದನು. ದೇವಾಲಯದ ವಿರುದ್ಧ ಮಾತನಾಡಿದರ ಬಗೆಗಿನ ಆರೋಪಗಳ ವಿಚಾರವಾಗಿ, ಆತನ ವಿಚಾರವು ಅದು ಅಲ್ಪ ಭಿನ್ನತೆಯನ್ನು ಮಾಡಿತೋ ಇಲ್ಲವೂ ಆದರೆ ತುಲನಾತ್ಮಕವಾಗಿ ದೇವಾಲಯದ ಮಹತ್ವವವು ಕಡಿಮೆಮಾಡುವಂತಿರಲಿಲ್ಲ.

"ದೇವದರ್ಶನ ಗುಡಾರವು ಅಡವಿಯೊಳಗೆ ನಮ್ಮ ಪಿತೃಗಳ ಬಳಿಯಲ್ಲಿ ಇತ್ತು. ಮೋಶೆಯ ಸಂಗಡ ಮಾತಾಡಿದವನು[46] - ನೀನು ನೋಡಿದ[47] ಮಾದರಿಯ ಪ್ರಕಾರವೇ ಅದನ್ನು ಮಾಡಬೇಕೆಂದು ನೇಮಿಸಿದ್ದನು. ನಮ್ಮ ಹಿರಿಯರು ಅದನ್ನು ತಮ್ಮ ತಂದೆಗಳಿಂದ ಹೊಂದಿದರು; ಅವರು ಯೆಹೋಶುವನ ಹಿಂದೆ ಬಂದು ದೇವರು ತಮ್ಮ ಮುಂದೆ

> ಹೊರಡಿಸಿದ ಅನ್ಯಜನಗಳ ದೇಶವನ್ನು ಸ್ವಾಧೀನಮಾಡಿಕೊಂಡಾಗ ಆ ಗುಡಾರವನ್ನು ಕೂಡ ತಂದರು. ಅದು ದಾವೀದನ[48] ಕಾಲದವರೆಗೂ ಇಲ್ಲೇ ಇತ್ತು" (7:44, 45).

ಸ್ತೇಫನನು ತನ್ನ ಕೇಳುಗರಿಗೆ ಅವರ ಪಿತೃಗಳು ಬಹುಕಾಲದ ಹಿಂದೆ ಯೆರೂಸಲೇಮಿನಲ್ಲಿ ಕಟ್ಟಲಾದ ದೇವಾಲಯದಲ್ಲಿ ದೇವರನ್ನು ಆರಾಧನೆ ಮಾಡುತ್ತಿದ್ದರು ಎಂಬುದನ್ನು ನೆನಪಿಸಿದನು. ದೇವರು ಮೋಶೆಗೆ ದೇವಾಲಯವನ್ನು ಕಟ್ಟುವ ನಿಯೋಗವನ್ನು ಕೊಡಲಿಲ್ಲ ಆದರೆ ಗುಡಾರವನ್ನು ಕಟ್ಟಲು ಅನುಮತಿಸಿದನು. ಅವರ ಪಿತೃಗಳು ದೇವರನ್ನು ಅರಣ್ಯದಲ್ಲಿ ಮತ್ತು ಕಾನಾನಿನಲ್ಲಿ *ನಾಲ್ಕನೂರು ವರ್ಷಗಳವರೆಗೆ* ಅಂದರೆ "ದಾವೀದನ ಆಳ್ವಿಕೆಯ ಸಮಯದವರೆಗೆ" ಗುಡಾರಗಳಲ್ಲಿ ಆರಾಧಿಸಿದರು.

ಒಡಂಬಡಿಕೆಯ ಮಂಜೂಷವು ಶಾಶ್ವತವಾಗಿ ನೆಲಸಲು ಕಟ್ಟಡವನ್ನು ಕಟ್ಟುವ ಮೂಲ ವಿಚಾರ ದಾವೀದನದು: "ದಾವೀದನು ದೇವರ ಸನ್ನಿಧಾನದಲ್ಲಿ ಕೃಪೆಹೊಂದಿ[49] ಯಾಕೋಬನ ವಂಶದವರಿಗೋಸ್ಕರ ದೇವಾಲಯವನ್ನು ಕಟ್ಟಿಸುವುದಕ್ಕೆ ಅಪ್ಪಣೆಯಾಗಬೇಕೆಂದು ಕೇಳಿಕೊಂಡನು" (7:46). ದಾವೀದನು ಈ ವಿಚಾರಕ್ಕಾಗಿ ಶ್ಲಾಘನೆಗೆ ಒಳಗಾಗಿದ್ದಾನೆ ಹೊರತು ಆತನಿಗೆ ದೇವಾಲಯನ್ನು ಕಟ್ಟಲು ಅನುಮತಿಸಲಾಗಲಿಲ್ಲ (2 ಸಮುವೇಲ 7:2-13): "ಆದರೆ ಆತನಿಗೋಸ್ಕರ ಮನೆಯನ್ನು ಕಟ್ಟಿಸಿದವನು ಸೊಲೊಮೋನನು [ದಾವೀದನ ಮಗನು] (7:47; ಹೋಲಿಸಿ 2 ಸಮುವೇಲ 7:2-13). ದೇವಾಲಯವು ಒಂದು ವೇಳೆ ಬಹು ಅವಶ್ಯವಾಗಿದ್ದರೆ, ದಾವೀದನು ಸೂಚಿಸಿದೊಡನೆಯೇ ಅದು ಕಟ್ಟಲ್ಪಡುತ್ತಿತ್ತು ಎಂಬುದು ಇದರ ಅನ್ವಯವಾಗಿದೆ. ಬದಲಾಗಿ, ಅನೇಕ ವರ್ಷಗಳು ಗತಿಸಿ ಹೋದನಂತರ ಅಂತಿಮವಾಗಿ ದೇವಾಲಯವು ಕಟ್ಟಲ್ಪಟ್ಟಿತು!

ಸ್ತೇಫನನು ನಂತರ ಅತೀ ಕಳಂಕಿತವಾದ ಹೇಳಿಕೆಯನ್ನು ಮಾಡುತ್ತಾನೆ (ಬಹುಶಃ ಈ ಹೇಳಿಕೆಯು ಆತನ ಮೊದಲ ಬೋಧನೆಯಲ್ಲಿ ಮಾಡಲ್ಪಟ್ಟಿತ್ತು, ಬಹುಶಃ ಈ ಹೇಳಿಕೆಯೇ ದೇವಾಲಯದ ವಿರುದ್ಧ ಮಾತನಾಡಿದನು ಎಂಬ ಆಪಾದನೆಗೆ ನಡಿಸಿತು): "ಆದರೂ ಪರಾತ್ಪರನು ಕೈಯಿಂದ ಕಟ್ಟಿದ ಮನೆಗಳಲ್ಲಿ ವಾಸಮಾಡುವವನಲ್ಲ" (7:48ಎ).[50] ಇಂಥ ಹೇಳಿಕೆಯು ಆತನ ಕೇಳುಗರ ಬಿಸಿಯನ್ನು ಇನ್ನೂ ಎತ್ತರಕ್ಕೆ ಏರಿಸಿತು - ಆದರೆ ಇದು ಧರ್ಮನಿಂದನೆಯೇ? ಸೊಲೊಮೋನನು ದೇವಾಲಯವನ್ನು ಸಮರ್ಪಿಸಿದಾಗ, ಆತನು ದೇವರನ್ನು ಪ್ರಾರ್ಥಿಸಿದನು, "ದೇವರು ನಿಜವಾಗಿ ಭೂಲೋಕದಲ್ಲಿ ವಾಸಿಸುವನೋ? ಆಕಾಶವು ಉನ್ನತೋನ್ನತವಾದ ಆಕಾಶವೂ ನಿನ್ನ ವಾಸಕ್ಕೆ ಸಾಲವು; ಹೀಗಿರುವಲ್ಲಿ ನಾನು ಕಟ್ಟಿಸಿದ ಈ ಮಂದಿರವು ಹೇಗೆ ಸಾಕಾದೀತು!" (1 ಅರಸು 8:27; ಹೋಲಿಸಿ 2 ಪೂರ್ವಕಾಲ 6:18). ಪ್ರವಾದಿಯಾದ ಯೆಶಾಯನೂ ಇದೇ ಸತ್ಯವನ್ನು ಒತ್ತಿ ಹೇಳಿದ್ದನ್ನು ಸ್ತೇಫನನು ಮಂಡಲಿಗೆ ನೆನಪಿಸುತ್ತಾನೆ:

> … ಆಕಾಶವು ನನಗೆ ಸಿಂಹಾಸನ, ಭೂಮಿಯು ನನ್ನ ಪಾದಗಳಿಗೆ ಪೀಠ. ನೀವು ನನಗೆ ಎಂಥ ಮನೆಯನ್ನು ಕಟ್ಟಿಕೊಡುವಿರಿ? ನನ್ನ ವಿಶ್ರಾಂತಿಗೆ ತಕ್ಕ ಸ್ಥಳವು ಯಾವದು? ಇವುಗಳನ್ನೆಲ್ಲಾ ನನ್ನ ಕೈಯೇ ನಿರ್ಮಿಸಿತಲ್ಲಾ ಎಂಬುದಾಗಿ ಕರ್ತನು ಹೇಳುತ್ತಾನೆ ಎಂದು ಪ್ರವಾದಿಯು ನುಡಿದಿದ್ದಾನೆ (7:48ಬಿ-50; ಹೋಲಿಸು. ಯೆಶಾಯ 66:1, 2).

ಸೃಷ್ಟಿಯೆಲ್ಲವೂ ಆತನ ದೇವಾಲಯ ಎಂದು ಯೆಶಾಯನು ಹೇಳುತ್ತಾನೆ! ಮಾನವ ನಿರ್ಮಿತ ಕಟ್ಟಡವು ಮಹತ್ವವಲ್ಲದ್ದು ಎಂದು ಕೆಲವರು ಸೂಚಿಸಿದಾಗ ನ್ಯಾಯಮಂಡಳಿಯು ಯಾಕೆ ವಿಚಲಿತವಾಗಬೇಕಿತ್ತು?

ದೇವರು ತನ್ನ ಜನರಲ್ಲಿ ವಾಸಿಸುತ್ತಾನೆ[51] ಎಂದು ತಿಳಿಸುವುದಕ್ಕೆ ಇದು ಯೋಗ್ಯವಾದ ಸಮಯವಾಗಿದೆ, ಯೆಶಾಯನೂ ಕೂಡ ದೇವರು ಹೇಳಿದ್ದನ್ನು ಸೂಚಿಸುವವನಾಗಿದ್ದಾನೆ,

"... ಪರಿಶುದ್ಧಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದುಕೊಂಡು" (ಯೆಶಾಯ 57:15).[52] ಸ್ತೆಫನನು ಹೇಗೋ, ಆತನ ಬೋಧನೆಯ ಮೂಲಕ ಸಾಗುವ ಎಲ್ಲ ಎಳೆಗಳನ್ನು ಜೊತೆಯಾಗಿಯೇ ಇರಿಸಿಕೊಳ್ಳುವ ಅವಕಾಶವನ್ನು ಎಂದಿಗೂ ಪಡೆಯಲಿಲ್ಲ.[53]

## ಗಾಬರಿಗೊಳಿಸುವ ಮುಕ್ತಾಯ (7:51-53)

ಸ್ತೇಫನನ ಮಂಡನೆಯ ತಾತ್ಪರ್ಯವು ವಚನ 51ರಲ್ಲಿ ಹಠಾತ್ತನೆ ಮತ್ತು ಉಗ್ರವಾಗಿ ಬದಲಾಯಿತು. ದ್ವೇಷವು ಆತನ ಕೇಳುಗರ ಮುಖದಲ್ಲಿ ಏರುತ್ತಿರುವುದನ್ನು ಆತನು ಕಂಡನೇ? ತಾನು ಹೇಳಬೇಕೆಂದಿರುವುದೆಲ್ಲವನ್ನು ಹೇಳಲು ಸಮಯವಿಲ್ಲ ಎಂದು ಆತನಿಗೆ ಅರಿವಾಯಿತೇ? "ಪ್ರವಾದಿಗಳ" (ವಚನ 48) ಬಗೆಗಿನ ಆತನ ಉದಾಹರಿಸುವಿಕೆಯು ಯೆಹೂದಿಗಳು ಪ್ರವಾದಿಗಳನ್ನು ಹೇಗೆ ನಡೆಸಿಕೊಳ್ಳುತ್ತಿದ್ದರು (ವಚನ 52) ಎಂಬುದನ್ನು ಉದಾಹರಿಸುವಂತದ್ದಾಗಿತ್ತೇ? ಆತನನ್ನು ಆರೋಪಿಸುವವರು ಸ್ವಂತ ಆರೋಪಿಗಳಾಗಿದ್ದಾಗಲೂ ಆತನ ವಿರುದ್ಧ ಆರೋಪವನ್ನು ತಂದರು, ಹೀಗೆ ಕಾರಣವು ಯಾವುದೆ ಆಗಿರಲಿ, ಸ್ತೇಫನನು ಸಮರ್ಥನೆ ಕೊರತೆಯಿಂದ ಆಕ್ರಮಣದತ್ತ ಹೊರಳಿದನು:

> ಚಂಡಿಗಳೇ ಮನಶ್ಶುದ್ಧಿಯೂ ಕರ್ಣಶ್ಶುದ್ಧಿಯೂ[54] ಇಲ್ಲದವರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವೂ ಯಾವಾಗಲೂ ಪವಿತ್ರಾತ್ಮನನ್ನು[55] ಎದುರಿಸುವವರಾಗಿದ್ದೀರಿ. ಪ್ರವಾದಿಗಳಲ್ಲಿ ನಿಮ್ಮ ಪಿತೃಗಳು ಹಿಂಸೆಪಡಿಸದವರು ಯಾರಿದ್ದಾರೆ?[56] ಅವರು ಆ ನೀತಿ ಸ್ವರೂಪನ[57] ಆಗಮನದ ವಿಷಯದಲ್ಲಿ ಮುಂತಿಳಿಸಿದವರನ್ನು ಕೊಂದರು, ನೀವು ಈಗ ಆತನನ್ನು ಹಿಡುಕೊಟ್ಟು ಕೊಂದವರಾದಿರಿ. ದೇವದೂತರ ಮೂಲಕ ನೇಮಕವಾದ ಧರ್ಮಶಾಸ್ತ್ರವನ್ನು ನೀವು ಹೊಂದಿದವರಾದರೂ ಅದನ್ನು ಅನುಸರಿಸುವುದಿಲ್ಲ ಎಂದು ಹೇಳಿದನು (7:51-53).

ಅವರು ಸ್ತೇಫನನನ್ನು, ದೇವರಿಗೆ ಗೌರವಕೊಡಲಿಲ್ಲ, ಎಂಬ ಕಾರಣದಿಂದ ಆರೋಪಿಸಿದರು, ಆದರೆ ಅವರು ತಾವೇ ದೇವರು ಯಾರ ಮೂಲಕ ಪರಿಶುದ್ಧಾತ್ಮನನ್ನು ಕಳುಹಿಸಿದನೋ ಅವರನ್ನು ಕೇಳದೆ ಇರುವ ಮೂಲಕ ಅವರು ದೇವರ ಪವಿತ್ರಾತ್ಮನನ್ನು ವಿರೋಧಿಸಿಧಿಸುವಂತವರಾದರು! ಅವರು ಸ್ತೇಫನನು, ಮೋಶೆಯನ್ನು ಮತ್ತು ಧರ್ಮಶಾಸ್ತ್ರವನ್ನು ಗೌರವಿಸಲಿಲ್ಲ ಎಂದು ದೂಷಿಸಿದರು! ಆದರೆ ತಾವೇ ಸ್ವಂತ ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸಲಿಲ್ಲ. ಅವರ ಕಿವಿಗಳು ಸತ್ಯವನ್ನು ಕೇಳುವುದನ್ನು ನಿರಾಕರಿಸಿದವು, ಅವರ ಹೃದಯಗಳು ಸತ್ಯವನ್ನು ಒಪ್ಪಿಕೊಳ್ಳುವುದನ್ನು ನಿರಾಕರಿಸಿದವು, ಮತ್ತು ಅವರ ಕುತ್ತಿಗೆಯು ಸತ್ಯಕ್ಕೆ ತಲೆಭಾಗುವುದನ್ನು ನಿರಾಕರಿಸಿತು!

ಅವರು ತಮ್ಮ ಪಿತೃಗಳಂತೆ ಇದ್ದರು! ಅವರ ಪಿತೃಗಳು ಯೋಸೇಫನನ್ನು ನಿರಾಕರಿಸಿದರು. ನಂತರ, ಅವರು ಮೋಶೆಯನ್ನು ಎರಡು ಸಾರಿ - ನಿರಾಕರಿಸಿದರು. ಅಂತಿಮವಾಗಿ, ಅವರು ಕೇವಲ ಪ್ರವಾದಿಗಳನ್ನು ತಿರಸ್ಕರಿಸಲಿಲ್ಲ, ಆದರೆ ಅವರನ್ನು ಕೊಂದರು. ಇದೇ ರೀತಿಯಲ್ಲಿ ನ್ಯಾಯಮಂಡಳಿಯು ನೀತಿವಂತನಾದ ಯೇಸುವನ್ನು ತಿರಸ್ಕರಿಸಿತು, ಆತನು ಬಂದಾಗ ಆತನನ್ನು - ಅವರು ಮರಣಕ್ಕೀಡು ಮಾಡಿದರು!

ಭಾಷ್ಯಕಾರರು ಕೆಲಸಾರಿ ಸ್ತೇಫನನು ಒಮ್ಮೆಲೇ ಕೋಪೋದ್ರಿಕ್ತನಾದುದನ್ನು ಚಿತ್ರಿಸುತ್ತಾರೆ, ಆತನ ಕಣ್ಣುಗಳು ಹೊಳೆಯುತ್ತಿದ್ದವು, ಆತನ ಬೆರಳುಗಳು - ಹೆಚ್ಚಾಗಿ ತನ್ನನ್ನು ಮರಣದಂಡನೆಗೆ ಒಪ್ಪಿಸುವಂತ ನ್ಯಾಯಮಂಡಳಿಯೆಡೆಗೆ ಧೈರ್ಯದಿಂದ ತಿವಿಯುತ್ತಿದ್ದವು. "ಕೃಪಾಭರಿತನಾದ" ಮನುಷ್ಯನ ಗುಣಲಕ್ಷಗಳನ್ನು ಹೊರಹಾಕುವಂತೆ ಇಲ್ಲಿ ಕಂಡು ಬರುತ್ತದೆ (6:8), "ಸಹೋದರರೇ, ಮತ್ತು ತಂದೆಗಳೇ" (7:2) ಎಂದು ನ್ಯಾಯಮಂಡಳಿಯನ್ನು

ಗೌರವಯುತವಾಗಿ ಸಂಬೋಧಿಸಿದನು, "ಕರ್ತನೇ ಈ ಪಾಪವನ್ನು ಅವರ ಮೇಲೆ ಹಾಕಬೇಡ!" (7:60) ಎಂದು ನಂತರ ಪ್ರಾರ್ಥಿಸಿದನು. 51ರಿಂದ 53ನೆಯ ವಚನದಲ್ಲಿ ಸ್ತೇಫನನ ಉದ್ದೇಶವು ನ್ಯಾಯಮಂಡಳಿಯ ಮೇಲೆ ಸಿಟ್ಟನ್ನು ಕಾರುವುದಾಗಿರಲಿಲ್ಲ, ಆದರೆ ಪಶ್ಚಾತ್ತಾಪಪಡುವುದಕ್ಕಾಗಿ ಅವರನ್ನು ಚಕಿತರನ್ನಾಗಿಸುವ ಒಂದು ಪ್ರಯತ್ನದ ಬದಲಾಗಿ ಅವರ ಕಲ್ಲು ಹೃದಯನ್ನು ಒಡೆಯುವುದು ಆತನ ಉದ್ದೇಶವಾಗಿತ್ತು ಎಂದು ನಾನು ಸೂಚಿಸುವವನಾಗಿದ್ದೇನೆ. ಆತನ ಹೃದಯವು ಬಿರಿಯುತ್ತಿದ್ದುದರಿಂದ ಸ್ತೇಫನನು ನಿಧಾನವಾಗಿ ಮಾತನಾಡಿರಬೇಕು ಎಂದು ನಾನು ನೆನಿಸುತ್ತೇನೆ.

## ಮುಕ್ತಾಯ

ಇದು ಸ್ತೇಫನನ ಅದ್ಭುತವಾದ ಪ್ರಸಂಗವಾಗಿತ್ತು. ಆತನ ಕೇಳುಗರು ತಮ್ಮ ಕಿವಿಗಳ ಮೇಲೆ ತಮ್ಮ ಕೈಗಳನ್ನು ಇಟ್ಟುಕೊಂಡು, ಆತನೆಡೆಗೆ ಕೂಗತೊಡಗಿದರು, ಮತ್ತು ಅವನನ್ನು ನ್ಯಾಯಮಂಡಳಿಯ ಕೋಣೆಯಿಂದ ಆತನನ್ನು ಹೊರಕ್ಕೆಳೆದುಕೊಂಡು ಹೋದರು. ಸ್ತೇಫನನು ಅವರ ಪಿತೃಗಳು ದೇವರ ವಿಮೋಚಕನನ್ನು ತಿರಸ್ಕರಿಸಿದಂತೆ ಆಗದಿರಿ ಎಂದು ಸಭಾಮಂದಿರಕ್ಕೆ ಸವಾಲನ್ನೊಡ್ಡಿದನು, ಆದರೆ ಅವರು ತಮ್ಮ ಪಿತೃಗಳು ಹೇಗೆ ವರ್ತಿಸಿದರೋ ಹಾಗೆಯೇ ವರ್ತಿಸಿ, ಅವನನ್ನು ಕಲ್ಲೆಸೆದು ಕೊಂದರು.

ಸ್ತೇಫನನ ಪ್ರಸಂಗದ ಮೂಲಕ ಯಾವುದೇ ಪಾಠಗಳು ನಮಗೆ ಸಿಕ್ಕುವವೋ? ಅನೇಕವು. ಉದಾಹರಣೆಗಾಗಿ ನಮ್ಮ ರಕ್ಷಣೆಗಾಗಿ ದೇವರು ಇತಿಹಾಸದಲ್ಲಿ ಮಾಡಿದ್ದೆಲ್ಲವನ್ನೂ ಪ್ರಶಂಸಿಸುವದು ನಮಗೆ ಅವಶ್ಯವಿದೆ. ಖಚಿತವಾಗಿ ನಮಗೆ ಅತೀ ಹೆಚ್ಚು ಸವಾಲು ದಾಯಕವಾದ ಪಾಠವೆಂದರೆ ಇಂದು ದೇವರ ವಿಮೋಚಕನನ್ನು ತಿರಸ್ಕರಿಸುವುದರ ಬಗೆಗೆ ಎಚ್ಚರದಿಂದಿರುವುದೆ ಆಗಿದೆ. "ಪುರಾತನಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ. ... ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತನಾಡಿದ್ದಾನೆ" (ಇಬ್ರಿಯ 1:1, 2) ಎಂಬುದನ್ನು ನಾವು ತಿಳಿದಿದ್ದೇವೆ. "ನನ್ನನ್ನು ಲಕ್ಷಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದು ಒಂದು ಇದೆ, ಅದು ಯಾವುದೆಂದರೆ, ನಾನು ಆಡಿದ ಮಾತು; ಅದೆ ಅವನಿಗೆ ಕಡೆ ದಿನದಲ್ಲಿ ತೀರ್ಪುಮಾಡುವದು" ಎಂದು ಯೇಸು ಹೇಳಿದನು (ಯೋಹಾನ 12:48).

"ಯೇಸು ನಮ್ಮೆದುರಿನಲ್ಲಿ ನಿಂತಾಗ ನಾನು ಅತನನ್ನು ಅಂಗೀಕರಿಸುತ್ತೇನೋ ಅಥವಾ ಆತನನ್ನು ತಿರಸ್ಕರಿಸುತ್ತೇನೋ?" ಎಂಬುದನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಪ್ರಶ್ನಿಸಿಕೊಳ್ಳಬೇಕು. ಇನ್ನೊಂದು ಮಾತಿನಲ್ಲಿ, ನಾನು ಸ್ತೇಫನನೊಡನೆ ನಿಂತುಕೊಳ್ಳುತ್ತೇನೋ ಅಥವಾ ಸಭಾಮಂದಿರದೊಡನೆ ನಿಂತುಕೊಳ್ಳುತ್ತೇನೊ?

---

ಟಿಪ್ಪಣಿಗಳು

[1]ಅಕ್ಷರ ಸಹ ಮಾತನಾಡಲ್ಪಟ್ಟ ಅಪೊಸ್ತಲನಲ್ಲದ (ಇತರರ ಮಾತಿನಲ್ಲಿ, ಅಪೊಸ್ತಲರೊಡನೆ ಯಾವ ಸಂಬಂಧವಿಲ್ಲದೆ) ಒಬ್ಬನೇ ಸೌವಾರ್ತಿಕ ಪ್ರಸಂಗವಾಗಿದ್ದು ಸುವಾರ್ತಿಕನಲ್ಲದ ಒಬ್ಬನಿಂದ ಪ್ರಸಂಗಿಸಲ್ಪಟ್ಟ ಪ್ರಸಂಗವಾಗಿದೆ. [2]ಇದು ಬಹುಶಃ ಉದ್ದವಾದ ಪ್ರಸಂಗ, ಯಾಕೆಂದರೆ ದೇವರು ತಾನು ಆದುಕೊಂಡಿರುವ ಜನರಿಗೆ ತನ್ನ ವಾರ್ತೆಯನ್ನು ಮುಟ್ಟಿಸುವ ಒಂದು ವಾರ್ತೆಯಾಗಿದೆ. [3]ಜಿಮ್ಮಿ ಆಲೆಸ್ ನಂಬುವುದೇನೆಂದರೆ, ಸ್ತೇಫನನು ಭೋಧನೆಯನ್ನು ಮುಗಿಸುವ ಮುಂಚೆಯೇ ಅಡ್ಡಿಮಾಡಲ್ಪಟ್ಟಿತು (ಅಪೊಸ್ತಲರ ಕೃತ್ಯದ ವೀಕ್ಷಣೆ [Searcy, Ark.: ಲೇಖಕರಿಂದ, 1986], 73), ಮತ್ತು ಇದನ್ನು ನಾನು ಒಪ್ಪುವವನಾಗಿದ್ದೇನೆ. ಉದಾಹರಣೆಗಾಗಿ ಹೊಸ ಒಡಂಬಡಿಕೆಯ ಬೋಧನೆ

ಯಲ್ಲಿ ಎಲ್ಲವೂ ಅವಶ್ಯವಾದ ಪುನರುತ್ಥಾನವು ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಸ್ತೇಫನನು ತಾನು ಮಾಡುವ ಪಾಠದ ಅನೇಕ ಎಳೆಗಳನ್ನು ಒಂದಡೆ ಸೇರಿಸಿ ಅನ್ವಯಮಾಡುವ ಯೋಚನೆಯನ್ನು ಹೊಂದಿದ್ದನು. ಆದರೆ ಅದನ್ನು ಹಾಗೆ ಮಾಡುವ ಮೊದಲೇ ಆತನು ಕೊಲ್ಲಲ್ಪಟ್ಟನು. [4]"ನೀನು ವ್ಯಕ್ತಿಯನ್ನು ಗೌರವಿಸದಿದ್ದರೂ, ಆತನ ಸ್ಥಾನವನ್ನು ಗೌರವಿಸು" ಎಂಬ ಹಿಂದಿನ ಪಾಠದಲ್ಲಿ ಮಾಡಿದ ಹೇಳಿಕೆಯನ್ನು ನೆನಪಿಸಿಕೊಳ್ಳಿರಿ. ಈ ಹೇಳಿಕೆಯು ಅಪೊಸ್ತಲರ ಕೃತ್ಯಗಳ ಪುಸ್ತಕ 1 ಅಧ್ಯಾಯ 5:12-42ರಲ್ಲಿ ಸಿಕ್ಕುತ್ತದೆ. [5]ಸ್ತೇಫನನ ಬೋಧನೆಗಳಿಗಾಗಿ ಕೆಲ ಭಾಷ್ಯಕಾರರು ಅತ್ಯಂತ ವಿಮರ್ಷಾತ್ಮಕವಾಗಿ, ಸ್ತೇಫನನ ಅಥವಾ ಲೂಕರಿಂದ ಮಾಡಲ್ಪಟ್ಟ ಏಳು ಐತಿಹಾಸಿಕ ದೋಷಗಳು ಎಂದು ಸೂಚಿಸುತ್ತಾರೆ. ಸ್ತೇಫನನು ಬೋಧಿಸುವ ಸತ್ಯದಲ್ಲಿ ಯಾವುದೇ ಪರಿಣಾಮವಿಲ್ಲದ ರೀತಿಯಲ್ಲಿ ದೋಷಗಳೆಂದು ಕರೆಯಲ್ಪಡುವ ಇವುಗಳು ಇರುವುದರಿಂದ, ಮತ್ತು "ನ್ಯಾಯನಿಪುಣರು" (ನ್ಯಾಯಶಾಸ್ತ್ರಿಗಳು) ಸ್ತೇಫನನ ನಿಜಾಂಶವನ್ನು ವಿರೋಧಿಸದೆ ಇರುವುದರಿಂದ, ಈ ಪಾಠದಲ್ಲಿ ಚರ್ಚಿಸಿದ ಆತನ ವಿಚಾರಧಾರೆಗಳನ್ನು ಅಡ್ಡಿಪಡಿಸಲು ಯಾವ ಕಾರಣಗಳೂ ಇಲ್ಲ ಎಂದು ನಾನು ನಂಬುತ್ತೇನೆ. ಸ್ತೇಫನನು ತನ್ನ ಬೋಧನೆಮಾಡುವುದಕ್ಕಾಗಿ ಪ್ರೇರೇಪಿತನಾದನು ಮತ್ತು ಲೂಕನು ಅದನ್ನು ದಾಖಲಿಸುವುದರಲ್ಲಿ ಪ್ರೇರೇಪಿತನಾದನು ಎಂದು ನಾನು ನಂಬು ತ್ತೇನೆ. ಅದ್ದರಿಂದ, ಸ್ತೇಫನನು ಹೇಳಿದ್ದಕ್ಕೆ ಸಂಬಂಧಿಸಿದಂತೆ ಯಾವುದೇ ದೋಷವೂ ಇಲ್ಲ, ಆದರೆ ಸಂಘರ್ಷವು ಕೇವಲ ನಮ್ಮ ಮಾಹಿತಿಯ ಅಥವಾ ತಿಳುವಳಿಕೆಯ ಕೊರತೆಯ ಪರಿಣಾಮವಾಗಿ ಕಾಣಿಸಿತು. ಆಗ ದೋಷಗಳೆಂಬುದಾಗಿ ಕರೆಸಲ್ಪಟ್ಟವುಗಳು ಉದ್ಭವಿಸಿದಾಗ, ಸಂಘರ್ಷವು ಕೇವಲ ಕಲ್ಪಿತವಾದವುಗಳು ಹೊರತು ನಿಜವಾದವುಗಳಲ್ಲ ಎಂದು ತೋರಿಸಲು ಅವುಗಳ ಜೊತೆ ನಾನು ಅವುಗಳನ್ನು ವಿವರಿಸುತ್ತೇನೆ. ಮೊದನೆಯದು ವಚನ 2 ಮತ್ತು 3ರಲ್ಲಿ ಕಂಡುಬರುತ್ತದೆ. ವಿಮರ್ಷಕರು ಹೇಳುವದೇನೆಂದರೆ ಆದಿಕಾಂಡ 11:31-12:3ರಲ್ಲಿ ದೇವರು ಅಬ್ರಹಾಮನಿಗೆ ಖಾರಾನಿನಲ್ಲಿ ಕಾಣಿಸಿಕೊಂಡಿದ್ದನು ವಚನ 3ರಲ್ಲಿ ವಾಗ್ದಾನನೊಂದಿಗೆ ಕಾಣಿಸಿಕೊಂಡಿದ್ದನು ಎಂದು ದಾಖಲಿಸುತ್ತದೆ, ಸ್ತೇಫ ನನು ಇದನ್ನು ಹೇಳುವಾಗ "[ಅಬ್ರಹಾಮನು] ಖಾರಾನಿನಲ್ಲಿ ಇದ್ದನು." ಆದಿಕಾಂಡ 15:7 ಮತ್ತು ನೆಹಮೀಯ 9:7, ಅಬ್ರಹಾಮನ ಊರ್ ಮತ್ತು ಕಸ್ದೀಯರ ದೇಶದಲ್ಲಿ ಇನ್ನೂ ಇರುವಾಗ ದೇವರು ಅಬ್ರಹಾಮನೆಡೆಗೆ ಬಂದದ್ದನ್ನು ಸ್ಪಷ್ಟವಾ ಗಿಸುತ್ತಾನೆ. ಅಬ್ರಹಾಮನಿಗೆ ದೇವರು ಊರ್‌ನಲ್ಲಿ ಕೊಟ್ಟ ಸಂದೇಶದ ಹೋಲಿಕೆಯಾದದ್ದನ್ನು ಆತನಿಗೆ ಖಾರಾನಿನಲ್ಲಿ ನಂತರ ಪಡೆದದ್ದನ್ನು ಸ್ತೇಫನನು ಪ್ರಕಟಿಸಿದನು. (ದೋಷಗಳೆಂದು ಕರೆಯಲ್ಪಡುವ ಇವುಗಳ ಹೆಚ್ಚಿನ ಚರ್ಚೆಗಾಗಿ ನೋಡಿ J. W. McGarvey's *New Commentary on Acts of Apostles* [Delight, Ark.: Gospel Light Publishing Co., n.d.] or Allen's *Survey of Acts*.) [6]ಕಸ್ದೀಯರ ಊರ್ ಪಟ್ಟದಲ್ಲಿ ಅಬ್ರಹಾಮನೆಡೆಗೆ ದೇವರು ಮೊದಲು ಸಂಧಿಸಿದನು. ಈ ಪುಸ್ತಕದಲ್ಲಿನ ಹಳೆ ಒಡಂಬಡಿಕೆಯ ಜಾಗತಿಕ ನಾಕಶೆಯನ್ನು ನೋಡಿರಿ. ಕಸ್ದಿಯವು ದಕ್ಷಿಣ ಬೆಬಿಲೋನಿಯದ ಒಂದು ಜಿಲ್ಲೆಯಾಗಿತ್ತು. ತದನಂತರ ಬೆಬಿಲೋನನ್ನು ಒಳಗೊಂಡ ದೇಶಕ್ಕೆ ಆ ಹೆಸರು ಅನ್ವಯವಾಯಿತು. [7]ಹಳೆಯ ಒಡಂಬಡಿಕೆಯ ನಾಕಶೆಯನ್ನು ನೋಡಿರಿ. [8]ಈ ಭೂಮಿಯು ಅಬ್ರಹಾಮನ ಕಾಲದಲ್ಲಿ ಕಾನಾನ ಎಂದು ಕರೆಯಲ್ಪಡುತ್ತಿತ್ತು; ಸ್ತೆಫನ ಕಾಲದಲ್ಲಿ ಇದು ಪಾಲಿಸ್ತೇನ ಎಂದು ಕರೆಯಲ್ಪಡುತ್ತಿತ್ತು. ಹಳೆಯ ಜಗತ್ತಿನ ನಾಕಶೆಯನ್ನು ನೋಡಿರಿ. [9]ಅಬ್ರಹಾಮನು ಹೂಣಿಡುವ ಸ್ಥಳವನ್ನು ಕೊಂಡುಕೊಂಡನು (7:16ರ ಮೇಲಿನ ಟಿಪ್ಪಣಿಯನ್ನು ನೋಡಿರಿ), ಆದರೆ ಅದು ಆತನ ಸಂತಾನದವರು ವಾಸಿಸುವ ಸ್ಥಳವಲ್ಲದ್ದರಿಂದ, ಇದು "ಪಿತ್ರಾರ್ಜಿತವಲ್ಲದ್ದು" ಎಂದು ಕರೆಯಲ್ಪಡುವುದಿಲ್ಲ. [10]ಇದು ಐಗುಪ್ತದಲ್ಲಿನ ಗುಲಾಮತನವನ್ನು ಸೂಚಿಸುವಂತದ್ದಾಗಿದೆ (ವಚನ 15 ಮತ್ತು 17ನ್ನು ಗಮನಿಸಿರಿ), "ನಾಲ್ಕನೂರು ವರ್ಷಗಳು" ಇದೊಂದು ದುಂಡಂಕಿ ಸಂಖ್ಯೆಯಾಗಿದೆ.

[11]ಆದಿಕಾಂಡ 17:9-14, 21ನ್ನು ನೋಡಿರಿ. [12]ಸ್ತೇಫನನ ಮಾತುಗಳ ಪ್ರಾರಂಭವು "ದೇವರ ಮಹಿಮೆಯ" (7:2) ಎಂಬ ಮಾತುಗಳ ಜೊತೆ ಆರಂಭವಾಯಿತು ಮತ್ತು "ದೇವರು ಮಹಿಮೆ" ಎಂಬ ಮಾತಿನೊಡನೆ ಅಂತ್ಯವಾಯಿತು (7:55), ಮತ್ತು ಆತನ ಮುಖವು ಪ್ರಕಾಶದಿಂದ ಹೊಳೆಯುತ್ತಿತ್ತು (6:15). [13]ಆದಿಕಾಂಡ 22:18; ಅಪೊಸ್ತಲರ ಕೃತ್ಯಗಳು 3:25; ಗಲಾತ್ಯ 3:16. [14]ಆದಿಕಾಂಡ 37:3, 4, 25-28. [15]ಆದಿಕಾಂಡ 39:2, 21. [16]ಆದಿಕಾಂಡ 41:38-45, 54. [17]ಆದಿಕಾಂಡ 41:54. [18]ಆದಿಕಾಂಡ 45:17-21. [19]ಇಬ್ರಿಯ ಬೈಬಲ್ "ಎಪ್ಪತ್ತೈದು" ಎಂಬ ಸಂಖ್ಯೆಯನ್ನು ಬಳಸುತ್ತದೆ (ಆದಿಕಾಂಡ 46:27; ವಿಮೋಚನಕಾಂಡ 1:5; ಧರ್ಮೋಪದೇಶಕಾಂಡ 10:22), ಆದರೆ ಹಳೆಯ ಒಡಂಬಡಿಕೆಯ ಗ್ರೀಕ್ ಭಾಷಾಂತರವು (ಸ್ಪಟುಗೆಂಟ) ಆದಿಕಾಂಡ 46:20ರಲ್ಲಿನ ಮನಸ್ಸೆಯ ಒಬ್ಬ ಮಗನ ಹೆಸರನ್ನು, ಎಫ್ರಾಯಿಮನ ಇಬ್ಬರನ್ನೂ, ಮತ್ತು ಇವರಿಬ್ಬರ ಒಬ್ಬ ಮೊಮ್ಮಗನನ್ನೂ ಕೂಡಿಸುತ್ತದೆ - ಹೀಗೆ ಅದು "ಎಪ್ಪತ್ತೈದು" ಸಂಖ್ಯೆಯನ್ನು ಮಾಡುತ್ತದೆ. [20]ಸ್ತೇಫನನು ಮಾತನಾಡುವ ಸಮಯದಲ್ಲಿ, ಶೆಕೆಮ್ ಸಮಾರ್ಯದಲ್ಲಿ ಇತ್ತು, ಯೂದಾಯಕ್ಕಿಂತ ಪವಿತ್ರ ಭೂಮಿ ಎಂಬ ವಿಚಾರವನ್ನು ಸ್ತೇಫನನು

ಹಚ್ಚುತ್ತಿದ್ದಾನೆ ಎಂದು ಕೆಲವರು ಯೋಚಿಸುವವರಾ ಗಿದ್ದರು - ಹೀಗೆ ಸಮಾರ್ಯಕ್ಕೆ ಸುವಾರ್ತೆಯನ್ನು ತೆಗೆದುಕೊಳ್ಳುವುದಕ್ಕೆ ಸಮಾರ್ಯವು ಸಿದ್ಧಮಾಡಲ್ಪಟ್ಟಿತು (8:5).


[21]ವಚನ 16 ಎರಡು ಭೂಭಾಗಗಳ ಖರೀದಿ ಮತ್ತು ಎರಡು ಸಮಾಧಿ ಸ್ಥಳಗಳನ್ನು ಒಳಗೊಂಡಿದೆದೆ (ಆದಿಕಾಂಡ 23:17, 18; 25:9-11; 33:19; 35:29; 50:19; ಯೆಹೋಶುವ 24:32). "ಸ್ತೇಫನನ ಸಾಂಪ್ರಾದಾಯಿಕ ತಂತ್ರವು (ಯಾಕೋಬ ಮತ್ತು 12ಜನ ಮೂಲಪಿತೃಗಳು ಹೂಣಲ್ಪಟ್ಟದ್ದು ಐಗುಪ್ತದಲ್ಲಿ ಅಲ್ಲ ಆದರೆ ಕಾನಾನದಲ್ಲಿ ಎಂಬುದನ್ನು ನೆನಪುಮಾಡಿಕೊಡುವ ಮೂಲಕ) ಆಧುನಿಕ ಕಿವಿಗಳಿಗೆ ವಿಚಿತ್ರವಾದುದು ಆಗಿದೆ ಆದರೆ ಆತನ ಕೇಳುಗರಿಗೆ ಇದು ಅರ್ಥಮಾಡಿಸಲ್ಪಟ್ಟಿತು" (Lewis Foster, notes on Acts, *The NIV Study Bible* [Grand Rapids, Mich.: Zondervan Publishing House, 1985], 1655). [22]ಇದು 5ರಿಂದ 7ವರೆಗಿನ ವಚನಗಳಿಗೆ ಆಧಾರವಾಗಿದೆ. [23]ವಿಮೋಚನಕಾಂಡ 1:8. [24]ವಿಮೊಚನಕಾಂಡ 2:2, 3. ಸ್ತೇಫನನು ಫರೋಹನ ರಾಜಾಜ್ಞೆಗೆ ಕೆಲ ಇಸ್ರಾಯೇಲರು ನಿಜ ವಾಗಿ ವಿಧೇಯರಾದರು ಎಂದು ಸೂಚಿಸುವವನಾಗಿದ್ದಾನೆ. [25]ವಿಮೊಚನಕಾಂಡ 2:1-10. [26]"ತೆರೆದಿಡು" ಎಂಬ ಪಾರಿಭಾಷೆಯು ಮೋಶೆಯ ಪಾಲಕರು ಫರೋಹನ ರಾಜಾಜ್ಞೆಗೆ ವಿಧೇಯರಾದರು ಎಂಬ ಅರ್ಥವನ್ನು ಕೊಡುತದೆ. ಫರೋಹನ ಆಜ್ಞೆಮಾಡಿದಂತೆ ಅವರು ಆತನನ್ನು ತಕ್ಷಣವೇ ತೆರದಿಡಲಿಲ್ಲವಾದ್ದರಿಂದ, "ತೆರೆದಿಡು" ಎಂಬ ಪದದ ಮೇಲೆ ಆಟವಾಡುವುದಾಗಿದೆ. ಬೇರೆಯವರ ಮುಂದೆ "ತೆರದಿಡುವುದರ" ಬದಲಾಗಿ, ಮೋಶೆಯು ಫರೋಹನ ಕುಮಾರ್ತೆಯ ಮುಂದೆ "ತೆರೆದಿಡಲ್ಪಟ್ಟನು." [27]ಮೋಶೆಯ ಬೆಳೆದುಬಂದುದಕ್ಕೆ ಸಂಬಂಧಿಸಿದಂತೆ ವಿಮೋಚನಕಾಂಡ ಪುಸ್ತಕದಲ್ಲಿ ನಾವು ಹೊಂದಿದಂತಹ ವಿವರಗಳನ್ನು ಸ್ತೇಫನನು ಕೊಡುತ್ತಾನೆ. ಮೋಶೆಯು ಅದ್ವಿತೀಯ ಮಹತ್ಕಾರ್ಯಗಳಿಗೆ ಸಂಬಂಧಿಸಿದ ಕೆಲ ಯೆಹೂದಿ ಸಂಪ್ರದಾಯಗಳ ಕುರಿತು ಯೋಸೆಫನು ವಿವರಣೆ ನೀಡಿದ್ದಾನೆ. ಗಮನಿಸಿ: ವಿಮೋಚನಕಾಂಡ 4:10ರಲ್ಲಿ ಸಿಕ್ಕುವ ಮೋಶೆಯ ಹೇಳಿಕೆಯು "ಪ್ರಭಾವದ ಮಾತುಗಳನ್ನಾಡುವ ವ್ಯಕ್ತಿ" ಎಂದು ವಿರೋಧಸುವುದಿಲ್ಲ (1) "ಮಾತಿನ ಅಧಿಕಾರವು" ವಾಕ್ಚಾತುರ್ಯವುಳ್ಳದು ಎಂಬ ಅರ್ಥವನ್ನು ಕೊಡುವುದಿಲ್ಲ.; ಐಗುಪ್ತದಲ್ಲಿ ಆತನ ಮಾತುಗಳು ಹೆಚ್ಚು ತೂಕಯುಕ್ತವಾಗಿದ್ದವು ಎಂಬುದರ ಅರ್ಥವಾಗಿರಬಹುದು. (2) ವಿಮೋಚನಕಾಂಡ 4:10ರಲ್ಲಿ ಮೋಶೆಯು ತನ್ನ ಅಸಮರ್ಪಕತೆಯನ್ನು ತುಸು ಹೆಚ್ಚು ಹೇಳಿದಂತಿದೆ; ಯಾಕೆಂದರೆ ದೇವರು ಆತನ ಮೇಲೆ ಹಾಕಬೇಕೆಂದಿರುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಇದು ಅರ್ಥೈಸಬಹುದು. [28]ಮೋಶೆಯು ಐಗುಪ್ತವನ್ನು ಬಿಟ್ಟಾಗ ಆತನು ನಾಲ್ವತ್ತು ವರ್ಷದವಾನಾಗಿದ್ದನು ಎಂಬ ಈ ವಿವರವು ವಿಮೋಚನಕಾಂಡ ಪುಸ್ತಕದಲ್ಲಿ ಕಂಡುಬರುವುದಿಲ್ಲ. [29]ವಿಮೋಚನಕಾಂಡ 2:12. [30]ಮೋಶೆಯು ಉರಿಯುವ ಮುಳ್ಳಿನ ಪೊದೆಯನ್ನು ನೋಡುವ ಮೊದಲೇ ದಿವ್ಯ ದರ್ಶನದ ಅರಿವುಳ್ಳವನಾಗಿದ್ದನು ಎಂಬುದು ವಿಮೋಚನಕಾಂಡದ ವಿವರಣೆಗೆ ಇನ್ನೊಂದು ವಿಚಾರವನ್ನು ಕೂಡಿಸುವುದಾಗಿದೆ. ಸ್ತೇಫನನು ಮೋಶೆಯನ್ನು ಅವರು ನಾಲ್ವತ್ತರ ವಯಸ್ಸಿನಲ್ಲಿ ತಿರಸ್ಕರಿದ್ದಾದರೆ, ಅವರು ದೇವರು ನೇಮಿಸಿದ ವಿಮೋಚಕನನ್ನು ತಿರಸ್ಕರಿಸಿದಂತೆಯೇ ಎಂದು ಸೂಚಿಸುವವನಾಗಿದ್ದಾನೆ.

[31]ವಿಮೋಚನಕಾಂಡ 2:13, 14. [32]ಮೋಶೆಗೆ ತಾನು ಓಡಿಬಂದುದರ ಕಾರಣವಾಗಿ ಫರೋಹನು ಮುಯ್ಯಿತೀರಿಕೊಳ್ಳುವನು ಎಂಬ ಭಯವು ಇತ್ತು (ವಿಮೋಚನಕಾಂಡ 2:15) ಎಂದು ವಿಮೋಚನಕಾಂಡವು ಚಿತ್ರಿಸುತ್ತದೆ. ಸ್ತೇಫನನ ಮಾತುಗಳು ಇಸ್ರಾಯೇಲರಿಂದ ತಿರಸ್ಕರಿಸಲ್ಪಟ್ಟದ್ದಕ್ಕೆ ಹೆಚ್ಚಿನ ಪ್ರೇರಣೆಗಳನ್ನು ಸೂಚಿಸುವವಗಳಾಗಿವೆ. [33]ಸ್ತೇಫನನು ಪ್ರಸಂಗದುದ್ದಕ್ಕೂ ದೂತರ ಪಾತ್ರದ ಬಗೆಗೆ ಒತ್ತಿ ಹೇಳುತ್ತಾ ಹೋಗುತ್ತಾನೆ. ಸಭಾಮಂದಿರವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡ, ಸದ್ದುಕಾಯರು ದೂತರನ್ನು ನಂಬುತ್ತಿರಲಿಲ್ಲ ಎಂಬುದನ್ನು ನೆನಪಿಡಿರಿ! [34]ವಿಮೋಚನಕಾಂಡ 3:1-4:17. [35]ಧರ್ಮೋಪದೇಶಕಾಂಡ 18:15-19; ಹೋಲಿಸು ಅಪೊಸ್ತಲರ ಕೃತ್ಯಗಳು 3:22, 23. [36]ನೋಡಿರಿ ಕೀರ್ತನೆ 22:22. ಸಾಮಾನ್ಯವಾಗಿ ಅಪೊಸ್ತಲರ ಕೃತ್ಯದಲ್ಲಿ ಭಾಷಾಂತರವಾದ "ಸಭಯು," "ದೇವಾರಾದನೆಗೆ ಸೇರಿದ ಮಂಡಳಿ" ಎಂಬುದರ ಗ್ರೀಕ ಪದದ ಭಾಷಾಂತರ ಎಕ್‌ಲೆಸಿಯಾ ಎಂದಾಗಿದೆ. ಇದು ಕ್ರೈಸ್ತ ಸಭೆಯು ಅರಣ್ಯದಲ್ಲಿ ಇತ್ತು (ಮತ್ತಾಯ 16:18) ಎಂಬರ್ಥವನ್ನು ಕೊಡುವುದಿಲ್ಲ. ಈ ಪದವು "ಜನರ ಕೂಡಿಕೊಳ್ಳುವಿಕೆಯನ್ನು" (assembly) ಎಂಬರ್ಥದಲ್ಲಿ ಬಳಿಕೆಯಾಗಿದೆ. "ಸಭೆ" ಅಪೊಸ್ತಲರ ಕೃತ್ಯಗಳ ಪುಸ್ತಕ. 1ರಲ್ಲಿನ ಪದಕೋಶದಲ್ಲಿ ನೋಡಿರಿ. [37]ರೋಮಾಪುರ 3:2; ಇಬ್ರಿಯ 5:12; 1 ಪೇತ್ರನು 4:11 ಸಹ ನೋಡಿರಿ. ಗ್ರೀಕ ಪದದ ಭಾಷಾಂತರವಾದ "ಓರ್ರ್ಯಾಕಲ್ಸ್" ಇದು ಲೋಗೋಸದ ಬಹುವಚನವಾಗಿದೆ, ಇದರ ಅರ್ಥವು "ವಾಕ್ಯವಾಗಿದೆ." ಅಕ್ಷರ ಸಹವಾಗಿ ಸ್ತೇಫನನು ಈ ಪಾರಿಭಾಷಿಕನ್ನು "ಸಜೀವ ವಾಕ್ಯ" ಎಂದು ಬಳಸಿದನು. ಓರ್ರ್ಯಾಕಲ್ಸ್ ಇದು ಲ್ಯಾಟಿನ್ ಪಾರಿಭಾಷೆಯಾಗಿದ್ದು ಇದರ ಅಕ್ಷರಸಹ ಅರ್ಥವು "ಮಾತನಾಡಲ್ಪಟ್ಟ ವಾಕ್ಯಗಳು" ಎಂದಾಗಿದೆ. [38]ವಿಮೋಚನಕಾಂಡ 32:3, 35. ಇದು ಬಹುಶಃ ಐಗುಪ್ತದ ಹೋರಿಯ ಆರಾಧನೆಯ

ಪ್ರತಿಬಿಂಬದಂತಿದೆ. [39]ಈ ವಾಕ್ಯಗಳನ್ನು ರೋಮಾಪುರ 1:24, 26, 28ರಲ್ಲಿನ "ದೇವರು ಹೆಚ್ಚಿನವುಗಳನ್ನು ಕೊಟ್ಟನು." ಎಂಬುದರೊಂದಿಗೆ ಹೋಲಿಸಿರಿ. [40]"ಆಕಾಶ ನಕ್ಷತ್ರ ಗಣವನ್ನು ಪೂಜಿಸುವುದಕ್ಕೆ" ಎಂಬುದು ಸೂರ್ಯ ಚಂದ್ರ ಮತ್ತು ನಕ್ಷತ್ರಗಳನ್ನು ಸೂಚಿಸುವವುಗಳಾಗಿವೆ ನೋಡಿರಿ ಧರ್ಮೋಪದೇಶಕಾಂಡ 17:3; 2 ಅರಸು 17:16; 21:3; 2 ಪೂರ್ವಕಾಲ 33:3, 4, 35; ಯೆರಮೀಯ 8:2; 19:13.

[41]ಇದು "ಸಣ್ಣಪ್ರವಾದಿಗಳು" ಎಂದು ಕರೆಯಲ್ಪಡುವ ಎಲ್ಲವುಗಳನ್ನು ಒಳಗೊಂಡಿರುವಂತಹ ಸುರುಳಿಯಾಗಿದೆ. ನಿರ್ಧಿಷ್ಟವಾಗಿ, ಸ್ತೇಫನನನ್ನು, ಸ್ಪೆಟುಗೆಂಟನಲ್ಲಿ ಬಳಸಲಾಗುತ್ತಿದ್ದ ಆಮೋಸ 5:25-27ರಿಂದ ವ್ಯಾಖ್ಯಾನಿಸಿದ್ದಾನೆ. [42]ತಮ್ಮ ಪಾಪಗಳಿಗಾಗಿ ಪ್ರಾಣಿಗಳ ಬಲಿಯನ್ನು ಕೊಡುವಂಥದ್ದನ್ನು ಯೋಚಿಸುವದು ಒಂದು ಕುತೂಹಲಕಾರಿ ರೀತಿಯಾಗಿದೆ; ಮುಗ್ಧ ಪ್ರಾಣಿಗಳು ಜನರ ಪಾಪಗಳಿಗಾಗಿ ಕಷ್ಟಪಡಬೇಕಿತ್ತು. [43]"ಗುಡಾರವು" ಈ ಪದವನ್ನು ವೇದಭಾಗವು ಅಕ್ಷರ ಸಹವಾಗಿ ಎರವಲು ಪಡೆದುಕೊಳ್ಳಲಾಗಿದೆ. NIVಯಲ್ಲಿ "ಮೊಲೋಖನ ಸಮಾಧಿ" ಎಂದಿದೆ. [44]Moloch ಮೊಲೋಖ ("Molech"; NIV) ಇದು ಇಬ್ರಿಯ ಭಾಷೆಯ ಅಮ್ಮೋನಿಯರ ದೇವತೆಯ ಹೆಸರಾಗಿದೆ. ರೊಂಪಾ ("Rephen"; NIV or "Remphan"; KJV) ಪಾರಿಭಾಷೆಯು ಗ್ರೀಕ್ ದೇವತೆಯಾದ "ಸ್ಯಾಟರ್ನ" ಬೆಳಕಿನ ದೇವತೆಗೆ ಬಳಸಲ್ಪಟ್ಟದ್ದಾಗಿದೆ. ಈ ಎರಡೂ ಇಸ್ರಾಯೇಲರು ಆರಾಧಾನೆ ಮಾಡುತ್ತಿದ್ದ "ಆಕಾಶ ನಕ್ಷತ್ರಗಣಗಳ" ಭಾಗವಾಗಿವೆ (ವಚನ 42). [45]ಆಮೋಸನು ದಮಸ್ಕದಲ್ಲಿದ್ದನು. ಸ್ತೇಫನನು ಪ್ರೇರಣೆಯ ಮೂಲಕವಾಗಿ ಬೆಬಿಲೋನನ್ನು ಬದಲಾಗಿ ಕೊಟ್ಟನು, ಯಾಕೆಂದರೆ ಅದು ಅವರ ನಿರಾಕರಣೆಯ ಕಾರಣ ಅವರನ್ನು ತೆಗೆಯಲ್ಪಟ್ಟ ಕೊನೆಯ ಪ್ರದೇಶವಾಗಿತ್ತು. [46]ಗುಡಾರವು "ಗುಡಾರದ ಸಾಕ್ಷಿ" ಎಂದು ಕರೆಯಲ್ಪಡುತ್ತಿತ್ತು, ಯಾಕೆಂದರೆ ಇದರ ಒಳಗಡೆ ಒಡಂಬಡಿಕೆಯ ಮಂಜೂಷವು (ಅಥವಾ ಸಾಕ್ಷಿ) ಇರುತ್ತಿತ್ತು. ಇದು ಹತ್ತು ಆಜ್ಞೆಗಳು ಇರುವ ಕಲ್ಲಿನ ಹಲಿಗೆಗಳನ್ನು ಒಳಗೊಂಡಿರುವಂತದ್ದು ಆಗಿದೆ (ವಿಮೋಚನಕಾಂಡ 25:22; 38:21). [47]ವಿಮೋಚನಕಾಂಡ 25:40; ಇಬ್ರಿಯ 8:5. [48]ದಾವೀದನ ಸಮಯದವರೆಗೆ ಕಾನಾನದಲ್ಲಿನ ಗುಡಾರದ ವ್ಯವಸ್ಥೆಯನ್ನು ಪುನರು ಜ್ಜೀವನಗೊಳಿಸಲಿಲ್ಲ. [49]1 ಸಮುವೇಲ 13:14; ಕೀರ್ತನೆ 89:20-37. [50]ಪೌಲನು ನಂತರದಲ್ಲಿ ಮೂರ್ತಿ ಪೂಜಕ ದೇವಾಲಯಗಳ ವಿಷಯವಾಗಿ ಹೇಳಿಕೆಯನ್ನು ಮಾಡಿದ್ದಾನೆ (ಅಪೊಸ್ತಲರ ಕೃತ್ಯಗಳು 17:24).

[51]ದೇವರು ಸಭೆಯೆಂಬ ಆಲಯದಲ್ಲಿ ವಾಸಮಾಡುವವನಾಗಿದ್ದಾನೆ (1 ಕೊರಿಂಥ 3:16, 17). ಗಮನಿಸಿ 1 ಪೇತ್ರನು 2:4-10. [52]ಯೆಶಾಯನು ಇದೇ ರೀತಿಯ ಹೇಳಿಕೆಯನ್ನು ಯೆಶಾಯ 66:2ರಲ್ಲಿ ಮಾಡಿದಂತೆಯೇ, ತಕ್ಷಣವೇ ಸ್ತೇಫನನಿಂದ ವಾಕ್ಯಗಳು ವ್ಯಾಖ್ಯಾನಿಸಲಟ್ಟವು. [53]ನಾವು ತಿಳಿದಿರುವ ಪ್ರಕಾರ, ಆತನ ಪ್ರಸಂಗವು ಅವನಿಗೆ ಕಲ್ಲನ್ನು ಹೊಡೆಯುತ್ತಿರುವವರಿಂದ ತುಂಡರಿಸ್ಪಟ್ಟಿತು. ಹೀಗಾದುದ್ದರಿಂದ ಈ ವಿಚಾರದಲ್ಲಿ ಅಪೊಸ್ತಲರ ಕೃತ್ಯದಲ್ಲಿನ ವಿಸ್ತರಿಸಲ್ಪಟ್ಟ ಇತರ ಪ್ರಸಂಗಗಳು ಚಿಕ್ಕಪ್ರಮಾಣದಲ್ಲಿ ಇರುತ್ತಾ ಇವೆ (ಪರಿಶುದ್ಧ ಆತ್ಮನಿಂದ ಪರಿಷ್ಕರಿಸಲ್ಪಟ್ಟ), ನಾವು ಈ ಒಂದು ಪ್ರಕಾರ್ದದಲ್ಲಿಯೂ ಕೂಡ ಸೇರಿಸಬಹುದು. ಸ್ತೇಫನನು ಮಾಡಿದ ಕೆಲ ಅನ್ವಯಗಳು ಲೂಕನಿಂದ ಸೂಚಿಸಲ್ಪಟ್ಟಿಲ್ಲ. [54]"ಚಂಡಿಗಳೇ, ಮನಶುದ್ಧಿ ಮತ್ತು ಕರ್ಣಶ್ಯುದ್ದಿ ಇಲ್ಲದವರು" ಮೊಂಡು ಜನರು, ಪೂರ್ವಾಗ್ರಹಪೀಡಿತರು ಮತ್ತ ಅವಿಧೇಯರಿಗಾಗಿ ಇರುವ ಜನರ ಬಗೆಗೆ ಬಳಸುವ ಹಳೆಯ ಒಡಂಬಡಿಕೆಯ ಪಾರಿಭಾಷೆಯಾಗಿದೆ (ವಿಮೋಚನಕಾಂಡ 33:3, 5; ಯಾಜಕಕಾಂಡ 26:41; ಯೆರಮೀಯ 6:10; ಯೆಜ್ಕೇಲ 44:7). ಚಂಡಿಗಳು ಇದು ತನ್ನ ಹೆಗಲ ಮೇಲೆ ನೊಗವನ್ನು ಹೊತ್ತುಕೊಳ್ಳಲು ನಿರಾಕರಿಸುವ ಮೊಂಡು ಎತ್ತನ್ನು ಸೂಚಿಸುತ್ತಿದೆ. ಸುನ್ನತಿಯು ದೇವರಿಗೆ ಒಪ್ಪಿಸಿಕೊಳ್ಳುವ ಚಿನ್ಹೆಯಾಗಿದೆ. ಆದ್ದರಿಂದ "ಮನಶ್ಯುದ್ಧಿ ಮತ್ತು ಕರ್ಣಶುದ್ದಿ ಇಲ್ಲದವರು" ಇದರ ಅರ್ಥವು ಅವರು ಕೇವಲ ದೇಹದಲ್ಲಿ ದೇವರನ್ನು ಹೋಲುವವರಾಗಿದ್ದಾರೆಯೇ ಹೊರತು ಆತ್ಮದಲ್ಲಿ ಅಲ್ಲ. ಅವರು ತಮ್ಮ ಹೃದಯಗಳಲ್ಲಿ ಕಠಿಣರಾಗಿದ್ದಾರೆ, ಮತ್ತು ಅವರು ದೇವರ ಸಂದೇಶಕರ ಸಂದೇಶ ವನ್ನು ಕೇಳುವುದನ್ನು ತಿರಸ್ಕರಿಸುವವರಾಗಿದ್ದಾರೆ, [55]ಅರಣ್ಯಕಾಂಡ 27:14. ಪರಿಶುದ್ದಾತ್ಮನ ಶಕ್ತಿಯಿಂದ ಮಾತನಾಡುತ್ತಿದ್ದ ಪ್ರವಾದಿಗಳನ್ನು ವಿರೋಧಿಸುವ ಮೂಲಕ ಅವರು ಪರಿಶುದ್ಧಾತ್ಮನನ್ನು ವಿರೋಧಿಸಿ ದರು (2 ಪೇತ್ರನು 1:21). ಜನರು ಈ ದಿನಗಳಲ್ಲಿ ಸುವಾರ್ತೆಯನ್ನು ತಿರಸ್ಕರಿಸುವಾಗ, ಅವರು ಪರಿಶುದ್ಧಾತ್ಮನನ್ನೂ ವಿರೋಧಿಸುತ್ತಿದ್ದಾರೆ. [56]ನೋಡಿರಿ ಇಬ್ರಿಯ 11:32-38. [57]ನೋಡಿರಿ ಅಪೊಸ್ತಲರ ಕೃತ್ಯಗಳು 3:14.




**ಫಿಲಿಪ್ಪ ಮತ್ತು ಪೇತ್ರರ ಪ್ರಯಾಣಗಳು**